Swabhimani Sahakari
Pages - 32, ₹12
Volume -15
Issue - 06
June - 2018

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ
ಶ್ರೀ ಎಚ್. ಡಿ. ಕುಮಾರಸ್ವಾಮಿ ಅವರು ದೆಹಲಿಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರನ್ನು
ಭೇಟಿ ಮಾಡಿ ರಾಜ್ಯಕ್ಕೆ ಹೆಚ್ಚಿನ ನೆರವು ಕೋರಿದರು



ರಾಜ್ಯದ ಉಪಮುಖ್ಯಮಂತ್ರಿಯಾಗಿ
ಡಾ. ಜಿ. ಪರಮೇಶ್ವರ ಅವರು ಅಧಿಕಾರ ಸ್ವೀಕರಿಸಿದ್ದಾರೆ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4324

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1142

ರಾಜ್ಯದ ನೂತನ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಪರವಾಗಿ
ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಹಾರ್ದಿಕ ಶುಭಾಷಯಗಳು



## ಕರ್ನಾಟಕ ರಾಜ್ಯ ವಿಧಾನ ಸಭೆಗೆ ನೂತನ ಶಾಸಕರಾಗಿ ಆಯ್ಕೆಯಾಗಿರುವ ಎಲ್ಲಾ ಸಹಕಾರಿಗಳಿಗೆ ಅಭಿನಂದನೆಗಳು – ಸಹಕಾರ ಕ್ಷೇತ್ರದ ಬಲಸಂವರ್ಧನೆಗೆ ತಮ್ಮಲ್ಲಿ ರಾಜ್ಯದ ಸಹಕಾರಿಗಳ ಮನವಿ

ಆತ್ಮೀಯರೇ, ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ವಿಶ್ವಪರಿಸರ ದಿನ ಹಾಗೂ ವಿಶ್ವ ಯೋಗ ದಿನದ ಶುಭಾಶಯಗಳು ಮತ್ತು ನಾಡಿನ ಸಮಸ್ತ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಷಯಗಳು.

ಕರ್ನಾಟಕ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಆಯ್ಕೆಯಾಗಿರುವ ಎಲ್ಲಾ ಶಾಸಕರಿಗೆ ಹಾಗೂ ವಿಶೇಷವಾಗಿ ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಶಾಸಕರಾಗಿ ಆಯ್ಕೆಯಾಗಿರುವ ಎಲ್ಲರಿಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಹಾಗೂ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳನ್ನು ಅತ್ಯಂತ ಸಂತೋಷದಿಂದ ಸಲ್ಲಿಸುತ್ತೇನೆ.

ಸಹಕಾರ ಕ್ಷೇತ್ರದ ಸಾಧನೆಗಳನ್ನು, ಸಹಕಾರ ಕ್ಷೇತ್ರದ ಕಾರ್ಯನಿರ್ವಹಣೆಯ ವಿಧಿ–ವಿಧಾನಗಳನ್ನು ಹಾಗೂ ಅದರ ಅವಶ್ಯಕತೆಯನ್ನು, ಸಾರ್ವಜನಿಕರಿಗೆ ಹಲವಾರು ರೀತಿಯಲ್ಲಿ ನೆರವಾಗುತ್ತಿರುವ, ಸರಕಾರದ ಅನೇಕ ಕಾರ್ಯಕ್ರಮಗಳ ಅನುಷ್ಠಾನದ ಸಾಧನವಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ದೇಶದ ಅರ್ಥ ವ್ಯವಸ್ಥೆಯಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬೃಹದಾಕಾರವಾಗಿ ಬೆಳೆದಿರುವ ಈ ಸಹಕಾರ ಕ್ಷೇತ್ರವನ್ನು ಬಲಪಡಿಸುವತ್ತ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಾ ಇದೀಗ ಶಾಸಕರಾಗಿ ಆಯ್ಕೆಯಾದ ಮಹನೀಯರೆಲ್ಲರಲ್ಲಿಯೂ ರಾಜ್ಯದ ಎಲ್ಲಾ ಸಹಕಾರಿಗಳ ಪರವಾಗಿ ಪ್ರಾರ್ಥಿಸುತ್ತೇನೆ.

ಸಾರ್ವಜನಿಕರ, ಸಹಕಾರ ತತ್ವ ಹಾಗೂ ಸಹಕಾರಿಗಳ ವಿಶೇಷವಾಗಿ ರೈತರ, ಸಮಾಜದ ಹಿಂದುಳಿದ ವರ್ಗದವರ ಮಹಿಳೆಯರ ಹಿತವನ್ನು ಗಮನದಲ್ಲಿರಿಸಿ, ರಾಜಕೀಯವನ್ನು ದೂರವಿರಿಸಿ, ಪಕ್ಷಾತೀತವಾಗಿ ಸಹಕಾರ ಕಾಯ್ದೆಗಳ ನೀತಿ ನಿಯಮಗಳ ರಚನೆಗೆ ಹೆಚ್ಚಿನ ಆದ್ಯತೆ ನೀಡಿ ತಾವುಗಳು ಕಾರ್ಯನಿರ್ವಹಿಸುವಿರಾಗಿ ಸಹಕಾರ ಕ್ಷೇತ್ರ ಅಪೇಕ್ಷಿಸುತ್ತದೆ ಹಾಗೂ ಈ ಬಗ್ಗೆ ಹೆಚ್ಚಿನ ವಿಶ್ವಾಸವನ್ನು ಹೊಂದಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಅನೇಕ ಹಿರಿಯರಾದ ಮಾನ್ಯ ಶ್ರೀ ಮುರುಗೇಶ ನಿರಾಣಿ, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಬಸನಗೌಡ ಪಾಟೀಲ ಯತ್ನಾಳ, ಶ್ರೀ ಪರಣ್ಣ ಮುನವಳ್ಳಿ, ಶ್ರೀಮತಿ ಶಶಿಕಲಾ ಜೊಲ್ಲೆ, ಶ್ರೀ ಪ್ರತಾಪಗೌಡ ಪಾಟೀಲ, ಶ್ರೀ ಮಹಂತೇಶ ದೊಡ್ಡಗೌಡರ, ಶ್ರೀ ಸುನೀಲ ಕುಮಾರ, ಶ್ರೀ ವೇದವ್ಯಾಸ ಕಾಮತ್, ಶ್ರೀ ಸುಕುಮಾರ ಶೆಟ್ಟಿ ಹಾಗೂ ಇನ್ನೂ ಕೆಲವು ಮಹನೀಯರು ಇರಬಹುದು. ತಮಗೆಲ್ಲಾ ವಿಶೇಷವಾಗಿ ಸಂಯುಕ್ತ ಸಹಕಾರಿಯು ಅಭಿನಂದಿಸುತ್ತದೆ.

ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯಕ್ಕೆ ಅನುಗುಣವಾಗಿ ಕೆಲವು ತಿದ್ದುಪಡಿಗಳ ಅಗತ್ಯವಿದೆ. ಈ ಬಗ್ಗೆ ಮಾನ್ಯ ನಿಬಂಧಕರ ಹಂತದಲ್ಲಿ ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇವರುಗಳ ಜೊತೆಗೆ ಚರ್ಚೆಯಾಗಿದೆ. ಅಧಿಕಾರಿಗಳ ಹಂತದಲ್ಲಿ ಈ ಅಗತ್ಯ ತಿದ್ದುಪಡಿಗಳು ಒಪ್ಪಿಗೆಯಾಗಿವೆ. ಸಚಿವ ಸಂಪುಟದ ಒಪ್ಪಿಗೆ ಹಾಗೂ ವಿಧಾನ ಮಂಡಳದ ಒಪ್ಪಿಗೆ ಪಡೆಯುವ ಹಂತದಲ್ಲಿರುವುದರಿಂದ ತಮ್ಮಗಳ ವಿಶೇಷ ಆಸಕ್ತಿ ಹಾಗೂ ಪ್ರೋತ್ಸಾಹದ ಅಗತ್ಯ ಇದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಶಾಸಕರ ಗಮನ ಸೆಳೆಯುವುದರಲ್ಲಿ ಸಂಯುಕ್ತ ಸಹಕಾರಿಯ ಜೊತೆಗೆ ಸಹಕಾರ ನೀಡಬೇಕಾಗಿ ಸಂಯುಕ್ತ ಸಹಕಾರಿಯು ಬಯಸುತ್ತದೆ.

– ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು.

“ಸಾರ್ವಜನಿಕರ, ಸಹಕಾರ ತತ್ವ ಹಾಗೂ ಸಹಕಾರಿಗಳ ವಿಶೇಷವಾಗಿ ರೈತರ, ಸಮಾಜದ ಹಿಂದುಳಿದ ವರ್ಗದವರ ಮಹಿಳೆಯರ ಹಿತವನ್ನು ಗಮನದಲ್ಲಿರಿಸಿ, ರಾಜಕೀಯವನ್ನು ದೂರವಿರಿಸಿ, ಪಕ್ಷಾತೀತವಾಗಿ ಸಹಕಾರ ಕಾಯ್ದೆಗಳ ನೀತಿ ನಿಯಮಗಳ ರಚನೆಗೆ ಹೆಚ್ಚಿನ ಆದ್ಯತೆ ನೀಡಿ ತಾವುಗಳು ಕಾರ್ಯನಿರ್ವಹಿಸುವಿರಾಗಿ ಸಹಕಾರ ಕ್ಷೇತ್ರ ಅಪೇಕ್ಷಿಸುತ್ತದೆ ಹಾಗೂ ಈ ಬಗ್ಗೆ ಹೆಚ್ಚಿನ ವಿಶ್ವಾಸವನ್ನು ಹೊಂದಿದೆ.”

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ . . .

ಜ್ಞಾನ ಜ್ಯೋತಿ ............................ 4
ಸಂಯುಕ್ತ ಸಹಕಾರಿ ಸಮಾಚಾರಗಳು .. ........................................ 5-17
ಸೌಹಾರ್ದ ಸಹಕಾರಿಗಳ ಸಮಾಚಾರಗಳು .................................... 18 - 22
ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ .......... ................................................ 23
ಲೇಖನ .................................... 24
ಯಶೋಗಾಥೆ ಮಾಲಿಕೆ ....... 25-29
ಆರ್‌ಬಿಐ ನ್ಯೂಸ್ ................ 30-31

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ / ಬ್ಯಾಂಕುಗಳ ಶಾಖೆಗಳ ನಿರ್ವಹಣೆ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ನಿರಂತರವಾಗಿ ಬೆಳವಣಿಗೆಯತ್ತ ಸಾಗುತ್ತಿದೆ. ರಾಜ್ಯದಲ್ಲಿ 4320ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಯಾಗಿದ್ದು, 1142 ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ಹೊಂದಿದೆ. ಈ ಸೌಹಾರ್ದ ಸಹಕಾರಿ ಕ್ಷೇತ್ರವು 60 ಲಕ್ಷ ಸದಸ್ಯರನ್ನು ಹೊಂದಿದ್ದು, ರೂ.700 ಕೋಟಿ ಶೇರು ಬಂಡವಾಳ, ರೂ.17000 ಕೋಟಿ ಠೇವಣಿ, ರೂ.19000 ಕೋಟಿ ದುಡಿಯುವ ಬಂಡವಾಳ, ರೂ.1300 ಕೋಟಿ ಕಾಯ್ದಿಟ್ಟ ನಿಧಿಗಳು, ರೂ.13000 ಕೋಟಿ ಸಾಲಗಳನ್ನು ನೀಡಿರುವುದು, 55000 ಜನರಿಗೆ ಉದ್ಯೋಗ ನೀಡಿರುವುದು, ರೂ.250 ಕೋಟಿ ಲಾಭ ಗಳಿಸಿರುವುದು, ಸದಸ್ಯರಿಗೆ ವೈವಿಧ್ಯಮಯವಾದ ಸೌಲಭ್ಯಗಳನ್ನು ನೀಡಿ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸರಕಾರಗಳ ಗಮನ ಸೆಳೆದಿರುವುದು ಗಮನಾರ್ಹ.

ಈ ಮಟ್ಟದ ಬೆಳವಣಿಗೆಗೆ ಸೌಹಾರ್ದ ಸಹಕಾರಿಗಳ ಕ್ಷೇತ್ರದ ಬಗ್ಗೆ ಅವರು ಹೊಂದಿರುವ ಜ್ಞಾನ, ಆಸಕ್ತಿ, ಅಭಿರುಚಿ, ಕ್ರಿಯಾಶೀಲತೆ ಹಾಗೂ ದೂರದೃಷ್ಟಿ. ಇದರಿಂದಾಗಿ ಅವರು ತಮ್ಮ ಕಾರ್ಯ ವಿಸ್ತರಣೆಯನ್ನು ಮಾಡುವುದು ಸಹಜ. ಕಾರ್ಯ ವಿಸ್ತರಣೆ ಮಾಡುವ ನಿಟ್ಟಿನಲ್ಲಿ ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಶಾಖೆಗಳನ್ನು ಪ್ರಾರಂಭಿಸುತ್ತಿರುವುದನ್ನು ಸಂಯುಕ್ತ ಸಹಕಾರಿಯು ಗಮನಿಸಿದೆ.

ಸಂಯುಕ್ತ ಸಹಕಾರಿಯು ಈ ವಿಷಯದಲ್ಲಿ ಗಮನಿಸುವುದೇನೆಂದರೆ ಶಾಖೆಗಳನ್ನು ಪ್ರಾರಂಭಿಸಿ ಸೌಹಾರ್ದ ಸಹಕಾರಿ/ ಬ್ಯಾಂಕ್ ತನ್ನ ಪ್ರಗತಿಯನ್ನು ಬೆಳೆಸಿಕೊಳ್ಳುವುದರ ಜೊತೆಗೆ ಆ ಶಾಖೆಗಳ ನಿರ್ವಹಣೆ, ಸಮರ್ಪಕ ಉಸ್ತುವಾರಿ, ಆರ್ಥಿಕ ಶಿಸ್ತು, ಕನಿಷ್ಠ ಸಿಬ್ಬಂದಿ ನಿರ್ವಹಣೆ, ಪ್ರಚಲಿತ ವಿಷಯಗಳ ಬಗ್ಗೆ ತರಬೇತಿ, ದೈನಂದಿನ ವ್ಯವಹಾರಗಳ ಪರಿಶೀಲನೆ, ಮಾರ್ಗದರ್ಶನಗಳ ಒಂದು ಸಮಗ್ರ ವಿವರಗಳ ಕೈಪಿಡಿ (Hand Book on Branch Management) ಹೊಂದಿರಬೇಕಾಗಿರುವುದು ಅವಶ್ಯಕ ಎಂದು ಅಭಿಪ್ರಾಯಪಟ್ಟಿದೆ. ಸಂಯುಕ್ತ ಸಹಕಾರಿಯು ಈ ನಿಟ್ಟಿನಲ್ಲಿ ಶಾಖೆಗಳನ್ನು ಹೊಂದಿರುವ ಸೌಹಾರ್ದ ಸಹಕಾರಿಗಳನ್ನು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳನ್ನು ಸಂಪರ್ಕಿಸಿ ಅವರುಗಳು ಶಾಖೆಗಳ ನಿರ್ವಹಣೆಯಲ್ಲಿ ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ವಿವರಗಳನ್ನು ಕೇಳಿದೆ. ಸೌಹಾರ್ದ ಸಹಕಾರಿಗಳು ಕಳುಹಿಸುವ ವಿವರಗಳನ್ನು ತಜ್ಞರ, ಅನುಭವಿಗಳ ಜೊತೆ ಚರ್ಚಿಸಿ, ಅಂತಿಮವಾಗಿ ಒಂದು ಸಾಮಾನ್ಯ ಮಾರ್ಗಸೂಚಿಯನ್ನು ಸಿದ್ಧಪಡಿಸಲು ಯೋಜಿಸಿದೆ. ಆದ್ದರಿಂದ, ಸೌಹಾರ್ದ ಸಹಕಾರಿಗಳು ಈ ವಿವರಗಳನ್ನು ತಕ್ಷಣವೇ ಕಳುಹಿಸಿ ಎಲ್ಲರೂ ಅನುಸರಿಸಬಹುದಾದ ಒಂದು ಕಾಮನ್ ಮಾರ್ಗಸೂಚಿಗಳನ್ನು ಸಿದ್ಧಪಡಿಸುವಲ್ಲಿ ಸಹಕಾರ ನೀಡುವುದು ಅಗತ್ಯ.



# ಜ್ಞಾನ ಜ್ಯೋತಿ

▸▸ ಶ್ರೀ ಶ್ರೀ ರವಿಶಂಕರ್

## ನಕಾರಾತ್ಮಕತೆಯಿಂದ ಮೇಲೇಳುವುದು ಹೇಗೆ?

ಜನರ ಬಗ್ಗೆ ತೀರ್ಪು ನೀಡುವಾಗ ನಿಮ್ಮ ವರ್ತನೆ ಗೊಂದಲಮಯವಾಗಲು ಆರಂಭಿಸುತ್ತದೆ. ಇತರರ ವಿರುದ್ಧ ನೀವು ಹೊತ್ತುಕೊಂಡಿರುವ ನಕಾರಾತ್ಮಕತೆಯ ಬೀಜಗಳಿಂದಾಗಿ ನೀವು ಬಿಗಿಯಾಗುತ್ತೀರಿ ಮತ್ತು ನಿಮ್ಮ ಕಂಪನಗಳು ನಕಾರಾತ್ಮಕವಾಗುತ್ತವೆ. ನಿಮ್ಮೊಳಗೆ ನಕಾರಾತ್ಮಕತೆಯನ್ನು ಹೊತ್ತುಕೊಂಡಿರುವಿರೆಂದೂ ನಿಮಗೆ ತಿಳಿಯುವುದಿಲ್ಲ. ನಿಮಗರಿವಿಲ್ಲದೆಯೇ ನಕಾರಾತ್ಮಕತೆಯು ನಿಮ್ಮನ್ನು ಹೀರಿಕೊಂಡು ಬಿಡುತ್ತದೆ. ನಕಾರಾತ್ಮಕತೆಯ ಸ್ವಭಾವವೇ ಹಾಗೆ. ಆದ್ದರಿಂದ, ನಮ್ಮ ಅರಿವನ್ನು ಬೆಳೆಸಿಕೊಳ್ಳಬೇಕು. ಆರಂಭ ಮಾಡಲು ಈ ನಾಲ್ಕು ಪ್ರಶ್ನೆಗಳನ್ನು ನಿಮ್ಮನ್ನು ನೀವೇ ಕೇಳಿಕೊಳ್ಳಿ :

1. **ಕ್ಷುಲ್ಲಕ ವಿಷಯಗಳಿಗೆ ಹೆಚ್ಚು ಗಮನ ನೀಡಿ ನಿಮ್ಮ ಮಾನಸಿಕ ಶಕ್ತಿಯನ್ನು ವ್ಯಯ ಮಾಡುತ್ತಿದ್ದೀರಾ?** ಮನಸ್ಸು ತನ್ನ ವೈಶಾಲ್ಯವನ್ನು ಅರಿತಾಗ ಕ್ಷುಲ್ಲಕ ವಿಷಯಗಳು ನಿಮ್ಮನ್ನು ಕಾಡುವುದಿಲ್ಲ. ಆಗಿಂದಾಗ, 'ಅವರು ಹಾಗೆಂದರು, ಅವಳು ಹಾಗೆಂದಳು. ಆ ವ್ಯಕ್ತಿ ನನ್ನತ್ತ ನೋಡಲೂ ಇಲ್ಲ. ಆಕೆ ಎಷ್ಟು ಕಠಿಣವಾಗಿ ಮಾತನಾಡಿದಳು' ಎಂದು ಆಲೋಚಿಸಿ, ನಿಮ್ಮ ಅಮೂಲ್ಯ ಮಾನಸಿಕ ಶಕ್ತಿಯನ್ನು ವ್ಯಯ ಮಾಡುತ್ತೀರಿ. ಜೀವನವೆಷ್ಟು ತಾತ್ಕಾಲಿಕ, ಕ್ಷಣಿಕ. ಇಷ್ಟು ಅಲ್ಪವಾದ ಜೀವನದಲ್ಲಿ ಯಾರು ಏನು ಹೇಳಿದರೆಂದು ಆಲೋಚಿಸುವಷ್ಟು ಸಮಯವಾದರೂ ಎಲ್ಲಿದೆ ಮತ್ತು ಏಕೆ ಆಲೋಚಿಸಬೇಕು? ಭಗವಂತನೇ ಬಂದು ಕಠಿಣವಾದ ಮಾತುಗಳನ್ನು ಹೇಳಿದರೂ ನೀವು ಮುಗುಳ್ನಗುತ್ತಾ ಕೇಂದ್ರೀಕೃತರಾಗಿರಬೇಕು. ಅದೂ ಒಂದು ಪ್ರಸಾದ ಎಂದುಕೊಂಡುಬಿಡಿ. ಒಂದು ಕಂಬದಂತೆ ನಿಮ್ಮ ಮನಸ್ಸನ್ನು ಅಲುಗಾಡಿಸಲಾರದಷ್ಟು ಕೇಂದ್ರೀಕೃತವಾಗಿ ಮಾಡಿಕೊಳ್ಳಬೇಕು. 'ನಾನು ಎಲ್ಲಾ ರೀತಿಯಲ್ಲೂ ಪೂರ್ಣವಾಗಿದ್ದೇನೆ. ತೃಪ್ತವಾಗಿದ್ದೇನೆ, ಭಗವಂತ ನನ್ನೊಡನೆ ಸದಾಕಾಲ ಇದ್ದಾನೆ. ನನಗೇನು ಬೇಕೋ ಅದು ಸರಿಯಾದ ಸಮಯದಲ್ಲೇ ಆಗುತ್ತದೆ' ಎಂದು ತಿಳಿಯಿರಿ.
2. **ನಿಮ್ಮ ಸುತ್ತಲೂ ಇರುವವರನ್ನು ದೂಷಿಸುತ್ತಿದ್ದೀರಾ ಅಥವಾ ನಿಂದಿಸುತ್ತಿದ್ದೀರಾ? ದ್ವೇಷವನ್ನು ಪೋಷಿಸುತ್ತಿರುವಿರಾ?** ಇತರರನ್ನು ದ್ವೇಷಿಸುವುದರಿಂದ ಅಥವಾ ನಿಂದಿಸುವುದರಿಂದ ನಿಮಗೇನೂ ಸಿಗುವುದಿಲ್ಲ. ನಿಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ದ್ವೇಷಅಥವಾ ಹಗೆಯನ್ನು ಯಾರೊಂದಿಗೂ ಸೃಷ್ಟಿಸಿಕೊಳ್ಳಬೇಡಿ. ಆಳವಾಗಿ ಆಲೋಚಿಸಿ; ನೀವು ಯಾರನ್ನು ದ್ವೇಷಿಸುತ್ತಿದ್ದೀರಿ ಎಂದು ನಿಮ್ಮನ್ನು ಕೇಳಿಕೊಳ್ಳಿ; ಅಂತರಾಳದೊಳಗಿರುವ ದ್ವೇಷವನ್ನು ನಿಲ್ಲಿಸಲು ಪೂರ್ಣವಾಗಿ ಯತ್ನಿಸಿ. ದ್ವೇಷವನ್ನು ಹೋಗಲಾಡಿಸಿ ನಿಮ್ಮನ್ನು ಶುದ್ಧಗೊಳಿಸಿಕೊಳ್ಳಿ. ಇಲ್ಲವಾದರೆ ಜೀವನದಲ್ಲಿ ನಿಜವಾದ ಅಭಿವೃದ್ಧಿ ಸಾಧ್ಯವಿಲ್ಲ. ಜೀವನದಲ್ಲಿ ನೀವೇನನ್ನಾದರೂ ಪಡೆದೇ ತೀರಬೇಕೆಂದಿದ್ದರೆ ಅದನ್ನು ಭಗವಾನ್ ಬ್ರಹ್ಮನಿಂದಾಗಲಿ ಅಥವಾ ರಾವಣನಿಂದಾಗಲಿ ತಡೆಯಲು ಸಾಧ್ಯವಿಲ್ಲ. ನೋವನ್ನು ಅಥವಾ ಅಹಿತವನ್ನು ಪಡೆಯಬೇಕೆಂಬ ಕರ್ಮವನ್ನು ಹೊಂದಿದ್ದಲ್ಲಿ ಅದು ನಿಮ್ಮ ಶತ್ರುಗಳಿಂದಾಗಲಿ ಅಥವಾ ಆಪ್ತ ಸ್ನೇಹಿತರಿಂದಾಗಲಿ ಅಥವಾ ಕುಟುಂಬದವರಿಂದಾಗಲಿ ಬಂದೇ ಬರುತ್ತದೆ ಮತ್ತು ನೀವು ಅದನ್ನು ಅನುಭವಿಸಲೇಬೇಕಾಗುತ್ತದೆ. ಯಾವುದರ ಅಥವಾ ಯಾರ ಬಗ್ಗೆಯಾಗಲಿ ದ್ವೇಷ ಹೊಂದಿ, ದೂರವಿರಿಸಲೆತ್ನಿಸುವುದು ಅಜ್ಞಾನಿಯ ಲಕ್ಷಣ. ಅದು ನಿಜವಾದ ಸಾಧಕರ ಗುಣವಲ್ಲ. ಸಾಧಕರು ಎಲ್ಲಾ ಸಮಯಗಳಲ್ಲೂ ಸಂತೋಷವಾಗಿರುತ್ತಾರೆ.
3. **ನೀವಿರುವಾಗ ಜನರು ಶಾಂತಿಯನ್ನು ಅನುಭವಿಸುತ್ತಾರೆಯೇ?** ನಮ್ಮ ಇರುವಿಕೆ ಹೇಗಿರಬೇಕೆಂದರೆ, ನಮ್ಮೆದುರಿಗೆ ಯಾರೇ ಬರಲಿ, ಅವರಲ್ಲಿ ಪ್ರಶಾಂತ ಮನೋಭಾವ ಉಂಟಾಗಬೇಕು. ಅವರು ಯಾವ ರೀತಿಯ ವ್ಯಕ್ತಿಯೇ ಆಗಿರಲಿ, ಅವರ ಬಾಹ್ಯ ವರ್ತನೆ ಹೇಗೇ ಇರಲಿ; ಅದು ಅವರ ಸಮಸ್ಯೆ.
4. **ನಿಮ್ಮನ್ನು ಸರಿಯಾಗಿ ನಡೆಸಿಕೊಳ್ಳಬೇಕೆಂದು ನಿಮಗನಿಸುತ್ತದೆಯೇ?** "ನನಗೆ ವಿಶೇಷ ಉಪಚಾರವೇನೂ ಬೇಡ. ಯಾರಿಂದಲೂ ನಾನು ಏನನ್ನೂ ಎದುರು ನೋಡುತ್ತಿಲ್ಲ. ನಾನು ಪ್ರೇಮದಲ್ಲಿ ಮುಳುಗಿದ್ದೇನೆ ಮತ್ತು ಎಲ್ಲರೊಡನೆಯೂ ಶಾಂತಿಯಿಂದ, ಪ್ರೀತಿಯಿಂದ ಇರುತ್ತೇನೆ" ಎಂದು ನೀವು ಆಲೋಚಿಸಬೇಕು. ಈ ನಂಬಿಕೆಯಲ್ಲಿ ನೀವು ಸ್ಥಿರವಾದಾಗ ಜಗತ್ತಿನಲ್ಲಿರುವ ಎಲ್ಲರೂ ನಿಮ್ಮ ಸ್ನೇಹಿತರಾಗುತ್ತಾರೆ.

ಸಂಗ್ರಹ : ಅಂತರ್ಜಾಲ

## ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು ಇದರ ಆಡಳಿತ ಮಂಡಳಿ ಪುನರ್ ರಚನೆ

ರಾಷ್ಟ್ರೀಯ ಸಹಕಾರಿ ಪ್ರಶಿಕ್ಷಣ ಪರಿಷತ್, ನವದೆಹಲಿಯ ಆಡಳಿತಾಧಿಕಾರಿಯವರು ದಿನಾಂಕ 11–05–2018ರಂದು ಆದೇಶ ಹೊರಡಿಸಿ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು ಇದರ ಆಡಳಿತ ಮಂಡಳಿಯನ್ನು ಪುನರ್ ರಚಿಸಿದ್ದಾರೆ. ಆಡಳಿತ ಮಂಡಳಿಯ ಸದಸ್ಯರುಗಳ ವಿವರ ಈ ರೀತಿ ಇದೆ.

ಅಧ್ಯಕ್ಷರು – ▸▸ ಸಹಕಾರ ಸಂಘಗಳ ನಿಬಂಧಕರು
ಸದಸ್ಯರುಗಳು – ▸▸ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರು
▸▸ ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು
▸▸ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು
▸▸ ಚೀಫ್ ಜನರಲ್ ಮ್ಯಾನೇಜರ್, ನಬಾರ್ಡ್
▸▸ ಕರ್ನಾಟಕ ರಾಜ್ಯ ಮಾರಾಟ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು
▸▸ ಬೆಂಗಳೂರು ವಿಶ್ವವಿದ್ಯಾಲಯದ ಪ್ರೊ. ಎಮ್.ಕೆ. ಶ್ರೀಧರ್
ಸದಸ್ಯ ಕಾರ್ಯದರ್ಶಿ – ▸▸ ನಿರ್ದೇಶಕರು, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು.



ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರುಗಳಾಗಿ ಕ್ಯಾಂಪ್ಕೋದ ಅಧ್ಯಕ್ಷರಾದ **ಶ್ರೀ ಎಸ್.ಆರ್.ಸತೀಶ್‌ಚಂದ್ರ** ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ **ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**ರವರ ನೇಮಕ.

◂◂ ಶ್ರೀ ಎಸ್.ಆರ್.ಸತೀಶ್‌ಚಂದ್ರ



ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ▸▸

## ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಕೇಂದ್ರ ಕಛೇರಿಗೆ ಮೈಸೂರು ವಿಶ್ವವಿದ್ಯಾನಿಲಯದ ಥರ್ಡ್ ಸೆಕ್ಟರ್ ರಿಸರ್ಚ್ & ಡೆವಲಪ್‌ಮೆಂಟ್‌ನ ನಿರ್ದೇಶಕರಾದ ಡಾ. ಯಶವಂತ ಡೋಂಗ್ರೆ ಹಾಗೂ ಡಾ. ಮೀರಾ, ಪ್ರಾಧ್ಯಾಪಕರು ಇವರು ದಿನಾಂಕ 31.05.2018ರಂದು ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಸಹಕಾರ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆ ಬಗ್ಗೆ ಚರ್ಚಿಸಲಾಯಿತು. ಸಹಕಾರ ಕ್ಷೇತ್ರದಲ್ಲಿ ವೈವಿಧ್ಯಮಯ ಕಾರ್ಯಗಳ ಅಗತ್ಯತೆ ಹೆಚ್ಚಾಗಿದೆ. ಗ್ರೀನ್ ಬ್ಯಾಂಕಿಂಗ್ ಪರಿಕಲ್ಪನೆಯನ್ನು ಪರಿಚಯಿಸಬೇಕಿದೆ ಹಾಗೂ ಯುವ ಜನತೆಯನ್ನು ಸಹಕಾರ ಕ್ಷೇತ್ರಕ್ಕೆ ಹೆಚ್ಚು ತೊಡಗಿಸಬೇಕಿದೆ ಎಂದು ಡಾ. ಯಶವಂತ ಡೋಂಗ್ರೆರವರು ಅಭಿಪ್ರಾಯಪಟ್ಟರು.

ಲಿಂಗ ಸಮಾನತೆಯ ಕುರಿತಂತೆ ಅಂತರ ರಾಷ್ಟ್ರೀಯ ಸಹಕಾರ ಕ್ಷೇತ್ರ ಹೆಚ್ಚಿನ ಮಹತ್ವ ನೀಡಿದ್ದು, ನಮ್ಮ ರಾಜ್ಯದಲ್ಲಿ ಕೂಡ ಇದನ್ನು ಪ್ರಚುರಪಡಿಸಬೇಕಿದೆ. ಅಲ್ಲದೇ, ಸಂಯುಕ್ತ ಸಹಕಾರಿಯ ಮತ್ತು ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಯು



ಸ್ಪರ್ಧಾತ್ಮಕವಾಗಿ ಉತ್ತಮವಾಗಿದೆ. ಸ್ವಾಭಿಮಾನಿ ಸಹಕಾರಿಯು ಉತ್ತಮ ಗುಣಮಟ್ಟದಲ್ಲಿ ಮೂಡಿ ಬರುತ್ತಿದೆ ಎಂದು ಡಾ. ಮೀರಾ ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧಿಕಾರಿಗಳು ಸಭೆಯಲ್ಲಿ ಅನೇಕ ವಿಷಯಗಳ ಬಗ್ಗೆ ಉಪಸ್ಥಿತ ಗಣ್ಯರೊಂದಿಗೆ ಚರ್ಚಿಸಿದರು. ವ್ಯವಸ್ಥಾಪಕ ನಿರ್ದೇಶಕರು ಸ್ವಾಯತ್ತ ಕಾಯ್ದೆಗಳ ಸೆಮಿನಾರ್ ಆಯೋಜನೆಯ ಕುರಿತು ಹಾಗೂ ರೂಪುರೇಷೆಗಳ ಬಗ್ಗೆ ಮಾಹಿತಿ ಹಂಚಿಕೊಂಡರು.

ಬೆಂಗಳೂರು ವಿಭಾಗ

# ದಾವಾ ದಾಖಲಾತಿ ವಿಧಾನ ಹಾಗೂ ಸಾಲ ವಸೂಲಾತಿ ಕ್ರಮಗಳು ಮತ್ತು ಸಹಕಾರಿಗಳ ಚುನಾವಣೆ ಕುರಿತು ತರಬೇತಿ ಕಾರ್ಯಾಗಾರ



**ಸಾಗರ :** ದಿನಾಂಕ 19 ಮೇ 2018ರಂದು ಶಿವಮೊಗ್ಗ ಜಿಲ್ಲೆಯ ಸಾಗರದ ಶಂಕರ ಮಠ ಸಭಾಂಗಣದಲ್ಲಿ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ದಾವಾ ದಾಖಲಾತಿ ವಿಧಾನ ಹಾಗೂ ಸಾಲ ವಸೂಲಾತಿ ಕ್ರಮಗಳು ಮತ್ತು ಸಹಕಾರಿಗಳ ಚುನಾವಣೆ" ಕುರಿತು ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಉದ್ಘಾಟಿಸಿ, ಮಾತನಾಡಿದರು. ಸೌಹಾರ್ದ ಸಹಕಾರಿ ಕಾಯ್ದೆ ಇಡೀ ದೇಶದಲ್ಲಿಯೇ ಮಾದರಿ ಕಾಯ್ದೆಯಾಗಿದ್ದು, ಸೌಹಾರ್ದ ಸಹಕಾರಿ ಚಳುವಳಿಯು ರಾಜ್ಯದಲ್ಲಿ ಸಹಕಾರಿಗಳಿಗೆ ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣವನ್ನು ನೀಡುವ ಮೂಲಕ ಸಹಕಾರಿಗಳಿಗೆ ಉತ್ತಮ ಆರ್ಥಿಕ ಮತ್ತು ಸಾಮಾಜಿಕ ಸೇವೆಗಳನ್ನು ನೀಡುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯು ಮಾತೃ ಸಂಸ್ಥೆಯಾಗಿ ಸದಾ ಸದಸ್ಯ ಸಹಕಾರಿಗಳ ಹಿತವನ್ನು ಕಾಪಾಡಲು ಹಾಗೂ ಶಾಸನಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದೆ. "ಸಂಯುಕ್ತ ಸಹಕಾರಿಯ ನಡೆ ಸದಸ್ಯ ಸಹಕಾರಿಯ ಗುಣಮಟ್ಟದ ಕಡೆ" ಎಂಬ ಧ್ಯೇಯ ವಾಕ್ಯದೊಂದಿಗೆ ರಾಜ್ಯದಲ್ಲಿ ಮಾದರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನ ಕುಮಾರರವರು ಮಾತನಾಡಿ ಇನ್ನು ಮುಂದೆ ಎಲ್ಲಾ ತರಬೇತಿಗಳು ಸಹಕಾರಿಗಳ ಆಶಯದಂತೆ ಸ್ಥಳೀಯವಾಗಿ ಅಂದರೆ ತಾಲ್ಲೂಕು ಕೇಂದ್ರಗಳಲ್ಲಿ ಆಯೋಜಿಸುವ ಮೂಲಕ ಬೇಡಿಕೆಗೆ ತಕ್ಕಂತೆ ತರಬೇತಿಗಳನ್ನು ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಈ ಕಾರ್ಯಾಗಾರದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಬಿ.ಎಸ್.ಗುಂಡುರಾವ್, ಶ್ರೀ ಬಿ.ಗಂಗಾಧರಯ್ಯ, ಶ್ರೀಮತಿ ಸರಸ್ವತಿ ಹಾಗೂ ಸಹ್ಯಾದ್ರಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಬಿ.ಎಸ್.ಅಶ್ವಥ, ಬೆಂಗಳೂರು ವಿಭಾಗೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಜಿ.ಜೋಷಿರವರು ಉಪಸ್ಥಿತರಿದ್ದರು. ಸಹಕಾರ ಗೀತೆಯನ್ನು ಶ್ರೀ ಶಕ್ತಿದಾತೆ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಪುಷ್ಪಾ ಹಾಗೂ ಸಂಗಡಿಗರು ನಡೆಸಿಕೊಟ್ಟರು. ಕಾರ್ಯಾಗಾರದ ಸ್ವಾಗತವನ್ನು ಶ್ರೀಗಂಧ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಕರ ಶಾನಭೋಗ ಮತ್ತು ಪ್ರಾಸ್ತಾವಿಕ ನುಡಿಯನ್ನು ವಿಭಾಗೀಯ ಅಧಿಕಾರಿ ಶ್ರೀ ನಾರಾಯಣ ಹೆಗಡೆರವರು ಹಾಗೂ ವಂದನಾರ್ಪಣೆಯನ್ನು ಶ್ರೀ ಅಲ್ಬರ್ಟ್ ವಿಕ್ಟೋರಿ ಫರ್ನಾಂಡಿಸ್‌ರವರು ನಡೆಸಿಕೊಟ್ಟರು, ಶ್ರೀ ಬಿ.ವಿ.ರವೀಂದ್ರನಾಥರವರು ನಿರೂಪಿಸಿದರು.

ದಾವಾ ದಾಖಲಾತಿ ವಿಧಾನ ಹಾಗೂ ಸಾಲ ವಸೂಲಾತಿ ಕ್ರಮಗಳ ಕುರಿತು ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಹಕಾರ ಸಂಘಗಳ ನಿವೃತ ಸಹಾಯಕ ನಿಬಂಧಕರಾದ ಶ್ರೀ ಎಸ್.ಜಿ.ಜೋಷಿ ಹಾಗೂ ಸಹಕಾರಿಗಳ ಚುನಾವಣೆ ಕುರಿತು ಶ್ರೀ ಮಂಜಪ್ಪ ಇವರು ತರಬೇತಿ ನೀಡಿದರು. ಕಾರ್ಯಾಗಾರದಲ್ಲಿ ಶಿವಮೊಗ್ಗ ಜಿಲ್ಲೆಯ 52 ಸೌಹಾರ್ದ ಸಹಕಾರಿಗಳಿಂದ 120 ಸಹಕಾರಿಗಳು ಭಾಗವಹಿಸಿ, ಪ್ರಯೋಜನ ಪಡೆದುಕೊಂಡರು.

## ಬೆಂಗಳೂರು ವಿಭಾಗ

# ಪ್ರವೇಶ ತರಬೇತಿ ಕಾರ್ಯಕ್ರಮ

**ಬೆಂಗಳೂರು :** ದಿನಾಂಕ 26 ಮೇ 2018ರಂದು ಬೆಂಗಳೂರು ವಿಭಾಗದ ನೂತನ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಒಂದು ದಿನದ "ಪ್ರವೇಶ ತರಬೇತಿ" ಕಾರ್ಯಾಗಾರವನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ತರಬೇತಿ ಕಾರ್ಯಾಗಾರವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್ ಗುಂಡುರಾವ್‌ರವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ



ನಿರ್ದೇಶಕರಾದ ಡಾ. ಆರ್.ಇಳಂಗೋವನ್, ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ನಾರಾಯಣ ಹೆಗಡೆ, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಧುಕರ್ ಹೆಗಡೆ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ವೀರಶೆಟ್ಟಿ ಕೆ. ಮತ್ತು ಶ್ರೀ ಅನಿಲ್ ಕುಮಾರ್‌ರವರು ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ 22 ಸೌಹಾರ್ದ ಸಹಕಾರಿಗಳಿಂದ 35 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

## ಬೆಳಗಾವಿ ವಿಭಾಗ

# ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕ್ರಮಗಳ ಕುರಿತು ತರಬೇತಿ

**ವಿಜಯಪುರ :** ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಹಾಗೂ ಸೌಹಾರ್ದ ಸಹಕಾರಿಗಳ ಪರಿಶೀಲನಾ ಸಭೆಯನ್ನು ದಿನಾಂಕ 18.05.2018ರಂದು ಕಲಾ ಭವನ, ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಶ್ರೀ ಸಿದ್ರಾಮಪ್ಪ ಉಪ್ಪಿನ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಎಂ.ಜಿ.ಪಾಟೀಲ, ವೃತ್ತಿಪರ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು



ನೆರವೇರಿಸಿದರು. ತರಬೇತಿಯಲ್ಲಿ 150 ಸೌಹಾರ್ದ ಸಹಕಾರಿಗಳಿಂದ 185 ಪ್ರತಿನಿಧಿಗಳು ಭಾಗವಹಿಸಿದ್ದರು.



**ಹುಬ್ಬಳ್ಳಿ :** ಧಾರವಾಡ ಮತ್ತು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 25.05.2018ರಂದು ಹೋಟೆಲ್ ರೇವನಕರ್ ಕಂಫರ್ಟ್ಸ್, ದೇಶಪಾಂಡೆ ನಗರ, ಹುಬ್ಬಳ್ಳಿ ಇಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಹಾಗೂ ಚುನಾವಣಾ ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಉದ್ಘಾಟನೆಯನ್ನು ಶ್ರೀಮತಿ ಸಾವಿತ್ರಿ ಬಿ. ಕಡಿ, ಉಪ ನಿಬಂಧಕರು, ಧಾರವಾಡ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಪಡಚಣ್ಣವರ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಉಪಾಧ್ಯಕ್ಷರು, ಕೆ.ಡಿ.ಸಿ.ಸಿ. ಬ್ಯಾಂಕ್, ಶಿರಸಿ ಇವರು ಆಗಮಿಸಿದ್ದರು. ತರಬೇತಿಯಲ್ಲಿ 40 ಸೌಹಾರ್ದ ಸಹಕಾರಿಗಳಿಂದ 60 ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾವೇರಿ :** ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 26.05.2018ರಂದು ಹೋಟೆಲ್ ಅಶೋಕ, ಪಿ.ಬಿ.ರೋಡ್, ಹಾವೇರಿ ಇಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಹಾಗೂ ಚುನಾವಣಾ ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ಎಂ.ಬಿ.ಕಲಾಲ, ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಉಪಾಧ್ಯಕ್ಷರು, ಕೆ.ಡಿ.ಸಿ.ಸಿ. ಬ್ಯಾಂಕ್, ಶಿರಸಿ ಇವರು ಆಗಮಿಸಿದ್ದರು. 60 ಸೌಹಾರ್ದ ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿದ್ದರು.






**ಉತ್ತರ ಕನ್ನಡ :** ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 28.05.2018ರಂದು ಟಿ.ಎಂ.ಎಸ್. ಸಭಾ ಭವನ, ಶಿರಸಿ ಇಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಹಾಗೂ ಚುನಾವಣಾ ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಶ್ರೀಮತಿ ಸರಸ್ವತಿ, ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಉಪಾಧ್ಯಕ್ಷರು, ಕೆ.ಡಿ.ಸಿ.ಸಿ. ಬ್ಯಾಂಕ್, ಶಿರಸಿ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಶಶಿಧರ ಎಲೆ, ನಿವೃತ್ತ ಅಪರ ನಿಬಂಧಕರು, ಬೆಂಗಳೂರು ಇವರು ಆಗಮಿಸಿದ್ದರು. 45 ಸೌಹಾರ್ದ ಸಹಕಾರಿಗಳಿಂದ 80 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟ :** ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 29.05.2018ರಂದು ಡಿ.ಸಿ.ಸಿ. ಬ್ಯಾಂಕ್, ನವನಗರ, ಬಾಗಲಕೋಟ ಇಲ್ಲಿ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಹಾಗೂ ಚುನಾವಣಾ ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು. ಅಧ್ಯಕ್ಷತೆಯನ್ನು ಶ್ರೀ ಜಿ.ಎನ್.ಪಾಟೀಲ್, ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಉದ್ಘಾಟನೆಯನ್ನು ಶ್ರೀ ಹೆಚ್.ಎಲ್.ಹುದಲೂರು. ಸಹಕಾರಿಗಳ ಸಹಾಯಕ ನಿಬಂಧಕರು, ವಿಜಯಪುರ ಇವರು ನೆರವೇರಿಸಿದರು. ಮುಖ್ಯ ಅಥಿತಿಗಳಾಗಿ ಎಸ್.ಎಸ್. ಮಿರ್ಜಿ, ಪ್ರಧಾನ ವ್ಯವಸ್ಥಾಪಕರು, ಬಿ.ಡಿ.ಸಿ.ಸಿ. ಬ್ಯಾಂಕ್, ಬಾಗಲಕೋಟ ಇವರು ಆಗಮಿಸಿದ್ದರು. 105 ಸೌಹಾರ್ದ ಸಹಕಾರಿಗಳಿಂದ 150 ಪ್ರತಿನಿಧಿಗಳು ಭಾಗವಹಿಸಿದ್ದರು.



# ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಅಧಿಕಾರ ವಿಕೇಂದ್ರೀಕರಣ : ವಿಭಾಗೀಯ ಕಛೇರಿಗಳ ಕರ್ತವ್ಯ, ಜವಾಬ್ದಾರಿ ಹಾಗೂ ಅಧಿಕಾರಗಳು

ದಿನಾಂಕ 16 ಸೆಪ್ಟೆಂಬರ್ 2017ರಂದು ನಡೆದ ಸಂಯುಕ್ತ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸ್ವೀಕೃತವಾದ ಸಂಯುಕ್ತ ಸಹಕಾರಿಯ ಉಪವಿಧಿ ತಿದ್ದುಪಡಿಯ ಪ್ರಸ್ತಾವನೆಯನ್ನು ದಿನಾಂಕ 28 ಫೆಬ್ರವರಿ 2018ರಂದು ಮಾನ್ಯ ಸಹಕಾರಿಗಳ ನಿಬಂಧಕರು ಅನುಮೋದಿಸಿದ್ದು, ಅದರಂತೆ ದಿನಾಂಕ 25 ಏಪ್ರಿಲ್ 2018ರಂದು ನಡೆದಿರುವ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ವಿಭಾಗೀಯ ಕಛೇರಿಗಳು ನಿರ್ವಹಿಸಬೇಕಾದ ಕರ್ತವ್ಯಗಳು, ಜವಾಬ್ದಾರಿಗಳು ಹಾಗೂ ಅಧಿಕಾರಗಳನ್ನು ನಿರ್ಣಯಿಸಲಾಗಿದೆ.

ವಿಭಾಗೀಯ ಕಛೇರಿಗಳು ನಿರ್ವಹಿಸಬೇಕಾದ ಕಾರ್ಯಚಟುವಟಿಕೆಗಳ ವಿವರಗಳನ್ನು ಸೌಹಾರ್ದ ಸಹಕಾರಿಗಳ ಗಮನಕ್ಕಾಗಿ ಪ್ರಕಟಿಸಿದೆ. ಸೌಹಾರ್ದ ಸಹಕಾರಿಗಳು ತಮ್ಮೆಲ್ಲ ಕೆಲಸ ಕಾರ್ಯಗಳಿಗೆ ವಿಭಾಗೀಯ ಕಛೇರಿಯನ್ನು ಹಾಗೂ ತಮ್ಮ ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸುವುದು.

1) ಸದಸ್ಯ ಸಹಕಾರಿಗಳ ಕಾರ್ಯಚಟುವಟಿಕೆಯ ಕುರಿತು ನಿರಂತರ ವೀಕ್ಷಣೆ ಹಾಗೂ ಪರಿವೀಕ್ಷಣೆ ಮಾಡುವುದು.
2) ಸಹಕಾರಿಯ ಪರಿವೀಕ್ಷಣಾ ವರದಿಯಲ್ಲಿನ ನ್ಯೂನ್ಯತೆಗಳ ಕುರಿತು ಸೂಕ್ತ ಕ್ರಮವಹಿಸುವುದು. ಅಗತ್ಯವಿದ್ದಲ್ಲಿ ಪೋಲೀಸರಿಗೆ/ ನ್ಯಾಯಾಲಯಕ್ಕೆ/ ಸಂಬಂಧಿಸಿದ ಪ್ರಾಧಿಕಾರಗಳಲ್ಲಿ ಪ್ರಕರಣ ದಾಖಲು ಮಾಡಲು ಕ್ರಮವಿಡುವುದು.
3) ಸಂಯುಕ್ತ ಸಹಕಾರಿಯ ಉಪವಿಧಿ ಸಂಖ್ಯೆ 35ಎ ರಂತೆ ಪ್ರಾಂತೀಯ ನಿರ್ದೇಶಕರ ಸಮಿತಿ ಸಭೆಯನ್ನು ನಡೆಸಲು ಕ್ರಮವಿಡುವುದು.
4) ಆಡಳಿತ ಮಂಡಲಿ ಮತ್ತು ಪ್ರಾಂತೀಯ ನಿರ್ದೇಶಕರ ಸಮಿತಿ ಸಭೆಯಲ್ಲಿನ ನಿರ್ಣಯಗಳನ್ನು ಅನುಷ್ಠಾನಗೊಳಿಸುವುದು.
5) ಸಹಕಾರಿಗಳು ನಿರ್ದಿಷ್ಟಪಡಿಸಿದ ಅವಧಿಯೊಳಗೆ ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ ಪಾವತಿ ಮಾಡುವಂತೆ ನೋಡಿಕೊಳ್ಳುವುದು.
6) ಸಹಕಾರಿಗಳು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ ನಡೆಸಿರುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಈ ಕುರಿತು ಅಗತ್ಯ ಕ್ರಮವಹಿಸುವುದು.
7) ಕಾಯ್ದೆ ಕಲಂ 34ರಡಿಯ ವಿದ್ಯುಕ್ತ ವರದಿಗಳನ್ನು ಪಡೆದುಕೊಳ್ಳುವುದು ಹಾಗೂ ವಿದ್ಯುಕ್ತ ವರದಿಗಳನ್ನು ಸಲ್ಲಿಸದಿರುವ ಸಹಕಾರಿಯ ವಿರುದ್ಧ ಕಾನೂನುರೀತ್ಯಾ ಕ್ರಮ ತೆಗೆದುಕೊಳ್ಳುವುದು.
8) ನಿಗದಿಪಡಿಸಿದ ನಮೂನೆಯಲ್ಲಿ ಸಹಕಾರಿಗಳಿಂದ ತ್ರೈಮಾಸಿಕ/ ಅರ್ಧವಾರ್ಷಿಕ ಹಾಗೂ ವಾರ್ಷಿಕ ಮಾಹಿತಿಗಳನ್ನು ಪಡೆಯುವುದು ಮತ್ತು ಅವುಗಳನ್ನು ಅಧ್ಯಯನ ಮಾಡಿ ತುಲನಾತ್ಮಕ ಮಾಹಿತಿಯನ್ನು ಕೇಂದ್ರ ಕಛೇರಿಗೆ ವರದಿ ಸಲ್ಲಿಸುವುದು.
9) ಆಡಳಿತ ಮಂಡಲಿ ಪದಾವಧಿಯ ಮುಕ್ತಾಯಕ್ಕೂ ಮುಂಚಿತವಾಗಿ ಚುನಾವಣೆ ನಡೆಸಲು ಸದಸ್ಯ ಸಹಕಾರಿಗಳಿಗೆ ಅಗತ್ಯ ಮಾರ್ಗದರ್ಶನ ಮಾಡುವುದು ಮತ್ತು ಚುನಾವಣೆಯನ್ನು ಸದಸ್ಯ ಸಹಕಾರಿಗಳು ಸಕಾಲದಲ್ಲಿ ನಡೆಸಿಕೊಳ್ಳಲು ಅಗತ್ಯ ಕ್ರಮವಹಿಸುವುದು.
10) ಸಹಕಾರಿಯ ಸಮಸ್ಯೆಗಳು, ದೂರುಗಳನ್ನು ಸ್ವೀಕರಿಸಿ ಸೂಕ್ತವಾಗಿ ತ್ವರಿತಗತಿಯಲ್ಲಿ ವಿಲೇವಾರಿ ಮಾಡುವುದು.
11) ಪ್ರಾಂತೀಯ ನಿರ್ದೇಶಕರ ಸಮಿತಿಯ ನಿರ್ಣಯಕ್ಕೆ ಒಳಪಟ್ಟು ಪ್ರಾಂತೀಯ ಕಛೇರಿಯು ತನ್ನ ಅಗತ್ಯತೆಗೆ ಅನುಗುಣವಾಗಿ ಬ್ಯಾಂಕ್ ಖಾತೆಗಳನ್ನು ಪ್ರವರ್ತಿಸುವುದು.
12) ಆಯಾ ಪ್ರಾಂತದ ಸಹಕಾರಿಗಳಿಂದ ಲೆಕ್ಕಪರಿಶೋಧನಾ ವರದಿಗಳನ್ನು ತರಿಸಿಕೊಳ್ಳುವುದು.
13) ಸಹಕಾರ ಚಳುವಳಿಗೆ ಹಾನಿಯುಂಟಾಗುವ ಸಂಭವವಿದ್ದಲ್ಲಿ ಅಥವಾ ತುರ್ತು ಕ್ರಮದ ಅವಶ್ಯಕತೆಯಿದ್ದಲ್ಲಿ, ಸೂಕ್ತ ಕಾನೂನು ಕ್ರಮವನ್ನು ಆದ್ಯತೆ ಮೇರೆಗೆ ತೆಗೆದುಕೊಳ್ಳತಕ್ಕದ್ದು.
14) ಸದಸ್ಯ ಸಹಕಾರಿಗಳ ಎಲ್ಲಾ ರೀತಿಯ ಅಂಕಿ–ಅಂಶಗಳ ಸಂಗ್ರಹಣೆಗೆ ಮತ್ತು ಯುಕ್ತ ನಿರ್ವಹಣೆಗೆ ವ್ಯವಸ್ಥೆ ಮಾಡುವುದು. ಪ್ರತಿ ವಿಭಾಗೀಯ ಕಛೇರಿಯು ಸಹಕಾರಿಗಳ ಮಾಹಿತಿಗಳನ್ನು ಸಂಗ್ರಹಿಸಿ ಡೇಟಾ ಬ್ಯಾಂಕ್‌ನಂತೆ ಕಾರ್ಯನಿರ್ವಹಿಸುವುದು.
15) ರಾಜ್ಯದ ಪ್ರತಿಯೊಂದು ಕಂದಾಯ ತಾಲ್ಲೂಕಿನಲ್ಲಿ ಕನಿಷ್ಠ ಒಂದು ಸೌಹಾರ್ದ ಸಹಕಾರಿ ಹಾಗೂ ಒಂದು ಮಹಿಳಾ ಸಹಕಾರಿ ನೋಂದಣಿಗೊಂಡು ಕಾರ್ಯನಿರ್ವಹಿಸುವಂತೆ ಕ್ರಮವಿಡುವುದು.
16) ಇ–ಸ್ಟ್ಯಾಂಪಿಂಗ್ ಕಾರ್ಯವನ್ನು ನಿರ್ವಹಿಸುವ ಎಸಿಸಿ ಕೇಂದ್ರಗಳ ಭೇಟಿ ಮತ್ತು ಅವುಗಳು ಅನ್ವಯಿಸುವ ಕಾಯ್ದೆ, ನಿಯಮಗಳಂತೆ ಹಾಗೂ ಸಂಯುಕ್ತ ಸಹಕಾರಿಯ ಸೂಚನೆಯಂತೆ ಕಾರ್ಯ ನಿರ್ವಹಿಸುತ್ತಿವೆಯೋ ಇಲ್ಲವೋ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು.
17) ಸಹಕಾರ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳೊಂದಿಗೆ/

ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಸೌಹಾರ್ದ ಸಹಕಾರಿ ಚಳುವಳಿಗೆ ಪ್ರೋತ್ಸಾಹಿಸುವಂತೆ ಪ್ರಯತ್ನಿಸುವುದು.

18) ಆಯಾ ಪ್ರಾಂತದಲ್ಲಿ ಹೊಸದಾಗಿ ಸಹಕಾರಿಯು ನೋಂದಣಿಯಾದ 30 ದಿನಗಳೊಳಗೆ ನೋಂದಣಿ ಪ್ರಾಧಿಕಾರದಿಂದ ಮಾಹಿತಿ ಸಂಗ್ರಹಿಸಿ ಪ್ರಾಥಮಿಕ ಹಂತದ ತರಬೇತಿ/ ಶಿಕ್ಷಣ ನೀಡುವುದು.

19) ವಿಭಾಗೀಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸುವ ನೌಕರರು ಸೌಹಾರ್ದ ಸಹಕಾರಿಗಳ ಫ್ರೆಂಡ್, ಫಿಲಾಸಫರ್ ಹಾಗೂ ಗೈಡ್ ಆಗಿ ಕಾರ್ಯನಿರ್ವಹಿಸುವುದು. ವ್ಯಾಪಾರ ಅಭಿವೃದ್ಧಿ ಯೋಜನೆ/ ಕಾರ್ಯಗಳನ್ನು ಮಾಡುವಂತೆ ಸಹಕಾರಿಗಳಿಗೆ ಪ್ರೇರೇಪಿಸುವುದು.

20) ಸಂಶಯಾಸ್ಪದ ವ್ಯವಹಾರಗಳ ಸೌಹಾರ್ದ ಸಹಕಾರಿಗಳ ಮೇಲೆ ತೀವ್ರ ನಿಗಾವಹಿಸಿ ತಳಮಟ್ಟದಲ್ಲಿ ಸರಿಪಡಿಸಲು ಅಗತ್ಯ ಕ್ರಮವಿಡುವುದು.

21) ಸಹಕಾರಿಗಳಲ್ಲಿ ಹೂಡಿಕೆ ಮಾಡಿದ ಹೂಡಿಕೆದಾರರ ಹಿತರಕ್ಷಣೆಯನ್ನು ಕಾಪಾಡುವುದು ಹಾಗೂ ಸಮಸ್ಯೆಯಾದಲ್ಲಿ ಆ ಕುರಿತು ಅಗತ್ಯ ಕಾನೂನು ರೀತ್ಯಾ ಕ್ರಮವಹಿಸುವುದು.

22) ಅಗತ್ಯವಿರುವ ಸ್ಥಳಗಳಲ್ಲಿ ನೂತನ/ ವೈವಿಧ್ಯತೆಯ ಸಹಕಾರಿಗಳ ನೋಂದಣಿಗೆ ಪ್ರೇರೇಪಿಸುವುದು.

23) ಸಹಕಾರಿಗಳು ಕಾಯ್ದೆ/ ನಿಯಮ ಹಾಗೂ ತಮ್ಮ ತಮ್ಮ ಉಪವಿಧಿ ಪ್ರಕಾರ ಕಾರ್ಯನಿರ್ವಹಿಸುತ್ತಿರುವುದರ ಕುರಿತು ಖಚಿತಪಡಿಸಿಕೊಳ್ಳುವುದು.

24) ಸಹಕಾರಿಗಳ ಅಗತ್ಯತೆಯನ್ನು ಅರಿತುಕೊಂಡು ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು.

25) ಸಂಯುಕ್ತ ಸಹಕಾರಿಯ ಉಪವಿಧಿ ಸಂಖ್ಯೆ 35ಬಿ ರಂತೆ ಅಗತ್ಯ ಕ್ರಮವಿಡುವುದು.

26) ಕೇಂದ್ರ ಕಛೇರಿಗೆ ಸಲ್ಲಿಕೆಯಾಗುವ ಪತ್ರ/ ದೂರು/ ಪ್ರಕರಣಗಳ ಕುರಿತು ವಿಲೇವಾರಿ/ ಪರಿಹಾರಕ್ಕಾಗಿ ಕ್ರಮವಿಡುವುದು.

27) ಕಛೇರಿಗೆ ಸಲ್ಲಿಕೆಯಾದ ಪತ್ರಗಳಲ್ಲಿ ಆದೇಶ ರೂಪದ ಪತ್ರಗಳಿಗೆ ಸೂಕ್ತ ಟಿಪ್ಪಣಿಯೊಂದಿಗೆ ಕೇಂದ್ರ ಕಛೇರಿಗೆ ರವಾನಿಸುವುದು.

28) ಸುಸ್ಥಿದಾರ ಸದಸ್ಯ ಸಹಕಾರಿಗಳಿಗೆ ಪ್ರಾರಂಭಿಕ ಮತ್ತು ಮಧ್ಯಂತರ ನೋಟೀಸ್ ಕಳುಹಿಸಿ ಪಾವತಿಯಾಗುವಂತೆ ಕ್ರಮವಿಡುವುದು.

29) ಸಹಕಾರಿಯ ಸದಸ್ಯರುಗಳಿಗೆ ಅಗತ್ಯತೆ ಆಧಾರದಲ್ಲಿ ತಾಲ್ಲೂಕು ಮಟ್ಟ/ ಜಿಲ್ಲಾ ಮಟ್ಟ/ ವಿಭಾಗ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು. ಅದರ ಕುರಿತಂತೆ ಪತ್ರ ವ್ಯವಹಾರ ನಡೆಸುವುದು.

30) ಲೆಕ್ಕಪರಿಶೋಧನಾ ವರದಿಗಳ ಮರುಪರಿಶೀಲನೆ ಮಾಡಿ, ಅನುಪಾಲನಾ ವರದಿಯನ್ನು ಪಡೆದು ನ್ಯೂನ್ಯತೆಗಳ ಮೇಲೆ ಅಗತ್ಯ ಕ್ರಮವಿಡುವುದು.

31) ಸಹಕಾರಿಗಳಿಗೆ ಅಗತ್ಯ ಸಲಹೆ, ಮಾರ್ಗದಶನ, ತಿಳುವಳಿಕೆ ಕಾರ್ಯಗಳನ್ನು ನಿರಂತರವಾಗಿ ಮಾಡುವುದು.

32) ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಸೂಚಿಸುವ ಕೆಲಸ ಕಾರ್ಯಗಳು.

## ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗಳಲ್ಲಿ ನ್ಯಾಯವಾದಿಗಳ ಹಾಗೂ ಸನ್ನದು ಲೆಕ್ಕಪರಿಶೋಧಕರ ಅಂತಿಮ ಪಟ್ಟಿ ತಯಾರಿಕೆಗಾಗಿ ಹೆಸರುಗಳ ನೋಂದಣಿಗೆ ದಿನಾಂಕ : 23-06-2018ರವರೆಗೆ ಕಾಲಾವಕಾಶ

ದಿನಾಂಕ 25–04–2018ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ವಿಭಾಗೀಯ ಕಛೇರಿಯವರು ಕಳುಹಿಸಿದ ಪ್ರತಿಯೊಂದು ವಿಭಾಗದಲ್ಲಿ ಸಂಪರ್ಕಿಸಬಹುದಾದ ನ್ಯಾಯವಾದಿಗಳ (ವಕೀಲರ) ಹಾಗೂ ಸನ್ನದು ಲೆಕ್ಕಪರಿಶೋಧಕರ ಪಟ್ಟಿಯನ್ನು ಅನುಮೋದಿಸಿದೆ.

ಈ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಲು ಅಪೇಕ್ಷಿಸುವ ನ್ಯಾಯವಾದಿಗಳು ಹಾಗೂ ಸನ್ನದು ಲೆಕ್ಕಪರಿಶೋಧಕರು ತಮ್ಮ ವಿವರಗಳನ್ನು ತಮ್ಮ ವ್ಯಾಪ್ತಿಗೆ ಬರುವ ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗಳನ್ನು ಅಥವಾ ಕೇಂದ್ರ ಕಛೇರಿಯನ್ನು ಸಂಪರ್ಕಿಸಿ ದಿನಾಂಕ 23–06–2018ರ ಒಳಗಾಗಿ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಿದೆ.

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : ಕೇಂದ್ರ ಕಛೇರಿ : 080–23378375–80, ಕಲಬುರಗಿ ವಿಭಾಗ : 08472–270222, ಬೆಳಗಾವಿ ವಿಭಾಗ : 0831–2401551, ಬೆಂಗಳೂರು ವಿಭಾಗ : 080–23525546 ಹಾಗೂ ಮೈಸೂರು ವಿಭಾಗ : 0821–2332299

ಎಲ್ಲಾ ವಿಭಾಗದಿಂದ ನೋಂದಣಿ ಅಪೇಕ್ಷಿತರ ಹೆಸರು ಸಂಗ್ರಹಿಸಿದ ನಂತರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿ ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸ್ವಾಭಿಮಾನಿ ಸಹಕಾರಿ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

## ಸೌಹಾರ್ದ ಸಹಕಾರಿಗಳು ಶುಲ್ಕ ಮತ್ತು ವರದಿಗಳನ್ನು ಸಲ್ಲಿಸುವ ಕುರಿತಾದ ಸಂಯುಕ್ತ ಸಹಕಾರಿಯ ಸುತ್ತೋಲೆ

ಸೌಹಾರ್ದ ಸಹಕಾರಿಗಳು ಪಾವತಿಸಬೇಕಾದ ಶುಲ್ಕ ಹಾಗೂ ನಿಧಿಗಳನ್ನು ಮತ್ತು ಕಳುಹಿಸಬೇಕಾದ ವರದಿಗಳನ್ನು/ ಮಾಹಿತಿಗಳನ್ನು/ ಪತ್ರಗಳನ್ನು ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗಳಿಗೆ ಕಳುಹಿಸುವ ಕುರಿತಂತೆ ಸಂಯುಕ್ತ ಸಹಕಾರಿಯಿಂದ ಹೊರಡಿಸುವ ಸುತ್ತೋಲೆಯನ್ನು ಸೌಹಾರ್ದ ಸಹಕಾರಿಗಳ ಅವಗಾಹನೆಗಾಗಿ ಪ್ರಕಟಿಸಿದೆ.

### ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph : 080-23378375-80, Email : souharda@souharda.coop

ಸಂಖ್ಯೆ : ಕರಾಸೌಸಂಸನಿ/ಸುತ್ತೋಲೆ/D-04/2018-19 ದಿನಾಂಕ : 21.05.2018

**ಸುತ್ತೋಲೆ-04**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ
ಮುಖ್ಯಕಾರ್ಯನಿರ್ವಾಹಕರುಗಳಿಗೆ,
ಮಾನ್ಯರೇ,

**ವಿಷಯ : ಸೌಹಾರ್ದ ಸಹಕಾರಿಗಳು ಶುಲ್ಕ ಮತ್ತು ವರದಿಗಳನ್ನು ಸಲ್ಲಿಸುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರಿಗೆ ಕಳುಹಿಸುತ್ತಿದ್ದ ವರ್ಷಾಂತ್ಯದ ಆರ್ಥಿಕ ಮಾಹಿತಿ, ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ, ಲೆಕ್ಕಪರಿಶೋಧನಾ ವರದಿ, ಸಾಮಾನ್ಯ ಸಭೆ ಮಾಹಿತಿ, ಕಾಯ್ದೆ ಕಲಂ 34ರಡಿ ಸಲ್ಲಿಸಬೇಕಾದ ಮಾಹಿತಿಗಳನ್ನು ಅಥವಾ ಇನ್ನಾವುದೇ ಪತ್ರ ವ್ಯವಹಾರಗಳನ್ನು ಇನ್ನು ಮುಂದೆ ಆಯಾ ವಿಭಾಗದಲ್ಲಿನ, ಈ ಕೆಳಕಂಡ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗಳಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಲು ಈ ಮೂಲಕ ತಿಳಿಸಿದೆ.

| ವಿಭಾಗ | ವಿಭಾಗದಲ್ಲಿನ ಜಿಲ್ಲೆಗಳು | ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿ ವಿಳಾಸ |
|---|---|---|
| 01 | 02 | 03 |
| ಬೆಂಗಳೂರು | ಬೆಂಗಳೂರು, ಬೆಂ. ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಶಿವಮೊಗ್ಗ, ರಾಮನಗರ, ತುಮಕೂರು, ದಾವಣಗೆರೆ, ಚಿತ್ರದುರ್ಗ. | **ಬೆಂಗಳೂರು ವಿಭಾಗೀಯ ಕಛೇರಿ** : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080–23525546 |
| ಮೈಸೂರು | ಮೈಸೂರು, ಹಾಸನ, ಕೊಡಗು, ಮಂಡ್ಯ, ಚಾಮರಾಜನಗರ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು. | **ಮೈಸೂರು ವಿಭಾಗೀಯ ಕಛೇರಿ** : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ : 0821 2332299 |
| ಬೆಳಗಾವಿ | ಬೆಳಗಾವಿ, ಹಾವೇರಿ, ಉತ್ತರ ಕನ್ನಡ, ಗದಗ, ಧಾರವಾಡ, ವಿಜಯಪುರ, ಬಾಗಲಕೋಟೆ, | **ಬೆಳಗಾವಿ ವಿಭಾಗೀಯ ಕಛೇರಿ** : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ:0831–2401551 |
| ಕಲಬುರಗಿ | ಬೀದರ, ಕೊಪ್ಪಳ, ಕಲಬುರಗಿ, ರಾಯಚೂರು, ಬಳ್ಳಾರಿ, ಯಾದಗಿರಿ, | **ಕಲಬುರಗಿ ವಿಭಾಗೀಯ ಕಛೇರಿ** : ನಂ. 1–4/3 ಎ, ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102. ದೂ : 08472–270222. |

ಈ ಮೇಲಿನ ಕಾಲಂ 2ರಲ್ಲಿ ಉಲ್ಲೇಖಿಸಿರುವ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳು ಕಾಲಂ 3ರಲ್ಲಿ ನೀಡಲಾದ ವಿಭಾಗೀಯ ಕಛೇರಿಗೆ ತಮ್ಮ ಸಹಕಾರಿಯ ಮಾಹಿತಿಗಳನ್ನು ಸಲ್ಲಿಸಲು ಸೂಚಿಸಿದೆ.

ವಂದನೆಗಳೊಂದಿಗೆ,

ಸಹಿ/–
**(ಶರಣಗೌಡ ಜಿ ಪಾಟೀಲ)**
ವ್ಯವಸ್ಥಾಪಕ ನಿರ್ದೇಶಕರು

# ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಅಧ್ಯಯನ ಹಾಗೂ ಅವಲೋಕನ

**ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ವಿವಿಧ ಸಂದರ್ಭಗಳಲ್ಲಿ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ, ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಿದ ಸಮಯದಲ್ಲಿ ಚರ್ಚಿಸಿದ ಹಾಗೂ ಗಮನಿಸಿದ ವಿಷಯಗಳು.**

- ಸಂಯುಕ್ತ ಸಹಕಾರಿಯ ಅಧ್ಯಕ್ಷರು ಮಾರ್ಚ್ ಮಾಹೆಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಚಿಕ್ಕಮಗಳೂರಿನ ಶ್ರೀ ವಾಸವಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ, ಕೊಪ್ಪ ತಾಲ್ಲೂಕಿನ ಯಡಗೆರೆ ಸೌಹಾರ್ದ ಪತ್ತಿನ ಸಹಕಾರಿ, ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಹಾಗೂ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್‌ಗಳಿಗೆ ಭೇಟಿ ನೀಡಿದರು. ಕಳೆದ ತಿಂಗಳಿನಲ್ಲಿ ಮಂಡ್ಯ ಜಿಲ್ಲೆಯ ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಗೆ ಹಾಗೂ ಜಿಲ್ಲೆಯ ಸಂಯುಕ್ತ ಸಹಕಾರಿಯ ಸಂಪರ್ಕ ಕಛೇರಿಗೆ ಭೇಟಿ ನೀಡಿದರು.
- ದಿನಾಂಕ 08-05-2018ರಂದು ಮಹಿಳಾ ಅಭ್ಯುದಯ ಸೌಹಾರ್ದ ಸಹಕಾರಿ ನಿ., ಮಂಗಳೂರು, ಬೋಳಾರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಬೋಳಾರ, ವಿಶ್ವ ಬೆಳಕು ಸೌಹಾರ್ದ ಸಹಕಾರಿ ನಿ., ಮಂಗಳೂರು, ಕಾಂಚನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮಂಗಳೂರು, ಪ್ರಣವ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಗಳಿಗೆ ಭೇಟಿ ನೀಡಿದರು. ಅವರ ಜೊತೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

1. ಹಿರಿಯ ಮಹಿಳಾ ಸಹಕಾರಿ ಶ್ರೀಮತಿ ಭಾರತಿ ಭಟ್ ನೇತೃತ್ವದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಅಭ್ಯುದಯ ಸೌಹಾರ್ದ ಸಹಕಾರಿಯು ಪ್ರಾರಂಭವಾಗಿ 8 ವರ್ಷಗಳು ಕಳೆದಿವೆ. 960 ಸದಸ್ಯರಿದ್ದಾರೆ. ರೂ.1.4 ಕೋಟಿ ಠೇವಣಿ ಇದೆ. ರೂ.1.5 ಕೋಟಿ ಸಾಲ ನೀಡಲಾಗಿದೆ. ಸಾಲ ವಸೂಲಾತಿ ಸಮಸ್ಯೆ ಇಲ್ಲ. ಎನ್.ಪಿ.ಎ. ಇಲ್ಲ. ಪ್ರಸಕ್ತ ಸಾಲಿನಲ್ಲಿ ರೂ.51000 ಲಾಭ ಗಳಿಸಿದೆ. ಗಣಕೀಕರಣವಾಗಿದೆ. ಸ್ವಂತ ಕಟ್ಟಡ ವಿಚಾರ ಇದೆ. ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸಹಕಾರಿಯ ಅಭಿವೃದ್ಧಿಯ ಬಗ್ಗೆ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿದ್ದಾರೆ. ಕಾಮನ್ ಸಾಫ್ಟ್‌ವೇರ್ ಬೇಗ ವ್ಯವಸ್ಥೆ ಮಾಡಿಕೊಡಲು ವಿನಂತಿಸಿರುತ್ತಾರೆ. ಸಹಕಾರಿ ತತ್ವಗಳ ಆಶಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ. ಸದಸ್ಯ ಹಾಗೂ ಸಂಯುಕ್ತ ಸಹಕಾರಿಯ ಸ್ನೇಹಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಅಭಿಪ್ರಾಯ ವ್ಯಕ್ತಪಡಿಸಿದರು.



ಮಹಿಳಾ ಅಭ್ಯುದಯ ಸೌಹಾರ್ದ ಸಹಕಾರಿ ನಿ., ಮಂಗಳೂರು.

2. ಬೋಳಾರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಬೋಳಾರ, ಮಂಗಳೂರು ಸಹಕಾರಿಯು 2011ರಲ್ಲಿ ಪ್ರಾರಂಭವಾಗಿದೆ. 936 ಸದಸ್ಯರನ್ನು ಹೊಂದಿದೆ. ರೂ.5.5 ಕೋಟಿ ಠೇವಣಿ ಇದೆ. ರೂ.4.5 ಕೋಟಿ ಸಾಲ ನೀಡಿದ್ದಾರೆ. ಪ್ರಸಕ್ತ ಸಾಲಿನಲ್ಲಿ ರೂ.10.00 ಲಕ್ಷ ಲಾಭ ಗಳಿಸಿದ್ದಾರೆ. ಸಾಮಾಜಿಕ ಕಳಕಳಿ ಎನ್ನುವ ಸಹಕಾರ ತತ್ವದಡಿಯಲ್ಲಿ ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿ ಸಾಮೂಹಿಕ ದೀಪಾವಳಿ ಆಚರಣೆ, ಈಫ್ತಹಾರ ಕೂಟ, ಮೆರಿಟ್ ಸ್ಕಾಲರ್‌ಶಿಪ್, ರಕ್ತದಾನ, ಆರೋಗ್ಯ ತಪಾಸಣೆಯಂತಹ ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ನಿರ್ದೇಶಕರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. 10 ಸ್ವ-ಸಹಾಯ ಗುಂಪುಗಳನ್ನು ನಿರ್ವಹಿಸಲಾಗುತ್ತಿದೆ. ಸಮಸ್ಯೆಗಳು ಯಾವುವು ಇರುವುದಿಲ್ಲ. ಸಂಯುಕ್ತ ಸಹಕಾರಿಯ ಅಧಿಕಾರಿಗಳು ಕಾಲ ಕಾಲಕ್ಕೆ ಅಗತ್ಯವಾದ ಮಾರ್ಗದರ್ಶನ ನೀಡುತ್ತಿದ್ದಾರೆ.

ಸಂಯುಕ್ತ ಸಹಕಾರಿಯು ರಾಜ್ಯಾದ್ಯಂತ ಎಲ್ಲಾ ಸೌಹಾರ್ದ ಸಹಕಾರಿಗಳ ಜೊತೆಗೆ ನಿಕಟ ಸಂಪರ್ಕ ಹೊಂದಿ ಅಭಿವೃದ್ಧಿ ಪರ ಚಿಂತನೆಗಳನ್ನು ಎಲ್ಲಾ ಕಡೆಗಳಲ್ಲೂ ಪ್ರಚುರಪಡಿಸುವ ಉದ್ದೇಶ ಹೊಂದಿ ಈ ರೀತಿ ಭೇಟಿಗಳನ್ನು ಮಾಡಲಾಗುತ್ತಿದೆ. ನಿಮ್ಮ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಪ್ರಯತ್ನ ನಮ್ಮದಾಗಿದೆ ಎಂದು ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ತಿಳಿಸಿದರು.



ಬೋಳಾರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಬೋಳಾರ.



ವಿಶ್ವ ಬೆಳಕು ಸೌಹಾರ್ದ ಸಹಕಾರಿ ನಿ., ಮಂಗಳೂರು.

3. ವಿಶ್ವ ಬೆಳಕು ಸೌಹಾರ್ದ ಸಹಕಾರಿ ನಿ., ಮಂಗಳೂರು ಜಿಲ್ಲಾ ವ್ಯಾಪ್ತಿಯನ್ನು ಹೊಂದಿರುವ ಈ ಸಹಕಾರಿಯು ಶ್ರೀ ಪ್ರಕಾಶ ಮೂಲತ್ವ ಇವರ ನೇತೃತ್ವದಲ್ಲಿ ಜಿಲ್ಲೆಯಲ್ಲಿ ವಿಭಿನ್ನವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ಇದಾಗಿದೆ. ಕಳೆದ 2 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. 1010 ಸದಸ್ಯರಿದ್ದಾರೆ. ರೂ.1.16 ಕೋಟಿ ಬಂಡವಾಳವಿದೆ. ರೂ.1.15 ಕೋಟಿ ಸಾಲ ನೀಡಿದ್ದಾರೆ. ಪ್ರಸಕ್ತ ಸಾಲಿನಲ್ಲಿ ರೂ.6.88 ಲಕ್ಷಗಳ ಲಾಭ ಗಳಿಸಿದೆ. ಸಹಕಾರಿಯಲ್ಲಿ ಶೈಕ್ಷಣಿಕ ಜಾಗೃತಿ ಕಾರ್ಯಕ್ರಮದಡಿಯಲ್ಲಿ ಎಸ್.ಎಸ್.ಎಲ್.ಸಿ. ನಂತರ ಏನು ಮಾಡಬೇಕು?, ಶಾಲೆಗಳನ್ನು ದತ್ತು ಕೊಳ್ಳುವುದು, ಸ್ವಯಂ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು, ಆರೋಗ್ಯ ಸಲಹಾ ಕಾರ್ಯಕ್ರಮಗಳು, ಪೇಪರ್ ರಹಿತ (Paperless transaction), ಆನ್‌ಲೈನ್ ಕಂಪ್ಯೂಟರ್ ಟ್ರೈನಿಂಗ್, ವೈಯಕ್ತಿಕ ಹಾಗೂ ಕೌಟುಂಬಿಕ ಸಮಸ್ಯೆಗಳಿಗೆ ಕೌನ್ಸೆಲಿಂಗ್, ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಉತ್ತಮ ಶೈಕ್ಷಣಿಕ ಹಾಗೂ ಅನುಭವದ ಸಿಬ್ಬಂದಿಯನ್ನು ಹೊಂದಿದೆ.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಮಾತನಾಡಿ ಸಹಕಾರ ರಂಗಕ್ಕೆ ಹೊಸ ಬೆಳಕು ನೀಡುವ ನಿಟ್ಟಿನಲ್ಲಿ ಈ ಸಹಕಾರಿ ಕಾರ್ಯನಿರ್ವಹಿಸುತ್ತಿದೆ. ವಿಭಿನ್ನ ಚಿಂತನೆಗಳನ್ನು ಇದರ ಅಧ್ಯಕ್ಷರು ಹಾಗೂ ನಿರ್ದೇಶಕರು ಹೊಂದಿದ್ದಾರೆ. ಒಂದು ಹೊಸ ವಿಷನ್ (ದೃಷ್ಟಿ) ಇದೆ, ಅಧ್ಯಯನ ಯೋಗ್ಯವಾಗಿ ಈ ಕ್ಷೇತ್ರ ಬೆಳೆಯಲು ಅವಕಾಶ ಇದೆ ಎಂದರು.

ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ ಕರ್ತವ್ಯ, ಜವಾಬ್ದಾರಿ ಹಾಗೂ ಅಧಿಕಾರ ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸಿದಲ್ಲಿ ಯಶಸ್ಸು ತಾನಾಗಿ ಕೈಗೂಡುತ್ತದೆ. ಉತ್ತಮ ಕ್ರಿಯಾಶೀಲ ಕಾರ್ಯದರ್ಶಿಯ ಹಾಗೂ ಸಿಬ್ಬಂದಿಯ ಆಯ್ಕೆ ಮಾಡಿದ್ದಾರೆ. ಇಂತಹ ಮನೋಭಾವದ ಕ್ರಿಯಾಶೀಲ ಮುಖ್ಯಕಾರ್ಯನಿರ್ವಾಹಕರು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಲ್ಲಿ ಇರಬೇಕು ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ ಎಂದು ತಿಳಿಸಿದರು.

4. ಕಾಂಚನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯು ಹಳೆಯ 1959ರ ಸಹಕಾರ ಸಂಘಗಳ ಕಾಯ್ದೆಯಿಂದ ಪರಿವರ್ತನೆಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ. ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ವ್ಯಾವಹಾರಿಕ ಸ್ವಾತಂತ್ರ್ಯ ಇರುವುದರಿಂದ ಯೋಜನೆಗಳ ತ್ವರಿತ ಅನುಷ್ಠಾನಕ್ಕೆ ಅವಕಾಶ, ಅದಕ್ಕಾಗಿ ಹೊಸ ಕಾಯ್ದೆಗೆ ಪರಿವರ್ತನೆಗೊಳಿಸಲಾಗಿದೆ ಎಂದು ಆಡಳಿತ ಮಂಡಲಿಯವರ ಅಭಿಪ್ರಾಯ. 3300 ಸದಸ್ಯರನ್ನು ಹೊಂದಿದೆ. ರೂ.20 ಕೋಟಿಗಳ ಠೇವಣಿ ಇದೆ. ರೂ.17 ಕೋಟಿಗಳ ಸಾಲ ನೀಡಲಾಗಿದೆ. 3 ಶಾಖೆಗಳನ್ನು ಹೊಂದಿದೆ. 3 ಶಾಖೆಗಳು ಹಾಗೂ ಕೇಂದ್ರ ಕಛೇರಿಯು ಸಹ ಸ್ವಂತ ಕಟ್ಟಡವನ್ನು ಹೊಂದಿರುವುದು ವಿಶೇಷ. ಮೀನುಗಾರರಿಗೆ, ಮೀನುಗಾರ ಮಹಿಳೆಯರಿಗೆ ಸಾಲ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರೂ.44 ಲಕ್ಷಗಳ ಲಾಭ ಗಳಿಸಿದೆ.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾತನಾಡಿ ಸಹಕಾರಿಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ವಿಷಯ. ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿಯವರು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸದಿರುವುದು ಕಂಡು ಬರುತ್ತಿದೆ. ಅಭಿವೃದ್ಧಿಗಾಗಿ ತರಬೇತಿ ಅವಶ್ಯಕ. ಮುಂಬರುವ ದಿನಗಳಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಅವಶ್ಯಕ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಅಧಿಕಾರಿ ಶ್ರೀ ವೈ.ಕುಮಾರರವರು ಮಾತನಾಡಿ ನಾವು ಮತ್ತು ನಮ್ಮ ಅಧಿಕಾರಿಗಳು ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿದಾಗ ಸಿಬ್ಬಂದಿಯವರಲ್ಲಿ ಹೆಚ್ಚಿನವರು ಮಹಿಳಾ ಸಿಬ್ಬಂದಿಯವರು ಇರುವುದನ್ನು ಗಮನಿಸಿದೆ. ಹೀಗಾಗಿ ಮಹಿಳಾ ಸಿಬ್ಬಂದಿಯವರಿಗಾಗಿಯೇ 2-3 ದಿನಗಳ ತರಬೇತಿ ಕಾರ್ಯಕ್ರಮವನ್ನು ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.



ಕಾಂಚನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮಂಗಳೂರು

5. ಪ್ರಣವ ಸೌಹಾರ್ದ ಸಹಕಾರಿ ನಿ., ಮಂಗಳೂರು ಇದು ಸಹ ಇತ್ತೀಚಿಗೆ ಪ್ರಾರಂಭವಾಗಿ ವಿಭಿನ್ನವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಯಾಗಿದೆ. ಸಾವಯವ, ಸ್ವ-ಉದ್ಯೋಗ, ಸಣ್ಣ ಮತ್ತು ಕಿರು ಕೈಗಾರಿಕೆಗಳಿಗೆ ಪ್ರೋತ್ಸಾಹ, ಸೋಲಾರ್, ಕಾಲೇಜುಗಳಲ್ಲಿ ಮೆಡಿಕಲ್ ಕ್ಯಾಂಪ್ ಏರ್ಪಡಿಸುವುದು, ಕಾರ್ಯಾಗಾರಗಳನ್ನು ಏರ್ಪಡಿಸುವುದು ಹೀಗೆ ವಿವಿಧ ಕ್ರಿಯಾಶೀಲ ಚಟುವಟಿಕೆಗಳನ್ನು ಮಾಡುತ್ತಿರುವ ಈ ಸಹಕಾರಿಯು ಅಧ್ಯಕ್ಷರಾದ ಶ್ರೀ ಜಿ.ಆರ್.ಪ್ರಸಾದರವರ ನೇತೃತ್ವದಲ್ಲಿ ಉತ್ತಮ ಪ್ರಗತಿಯತ್ತ ದಾಪುಗಾಲು ಹಾಕುತ್ತಿದೆ. 2300 ಸದಸ್ಯರನ್ನು ಹೊಂದಿದೆ. ರೂ.3.54 ಕೋಟಿಗಳ ಠೇವಣಿ ಇದೆ. ರೂ.3.67 ಕೋಟಿಗಳ ಸಾಲ ನೀಡಿದ್ದಾರೆ. ಪ್ರಸಕ್ತ ಸಾಲಿನಲ್ಲಿ ರೂ.4.79 ಸಾವಿರ ಲಾಭ ಗಳಿಸಿದೆ.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಮಾತನಾಡಿ ಸಹಕಾರಿಯು ಯಾವುದೇ ಸಮಸ್ಯೆಗಳು ಗಮನಕ್ಕೆ ತರಬಹುದು. ಪ್ರಜ್ಞಾವಂತ ಹಾಗೂ ಅನುಭವಿ ನಿರ್ದೇಶಕರು ಹಾಗೂ ದಕ್ಷ ಸಿಬ್ಬಂದಿಯವರು ಅಧ್ಯಕ್ಷರ ಹಾಗೂ ಸದಸ್ಯರ ಆಶಯಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವುದು ಸೌಹಾರ್ದ ಸಹಕಾರಿಗಳು ಹಾಗೂ ಸಂಯುಕ್ತ ಸಹಕಾರಿಗೆ ಹೆಮ್ಮೆಯ ವಿಷಯ ಎಂದು ತಿಳಿಸಿದರು.



ಪ್ರಣವ ಸೌಹಾರ್ದ ಸಹಕಾರಿ ನಿ., ಮಂಗಳೂರು

- ದಿನಾಂಕ 18 ಮೇ 2018ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಬಿ.ಗಂಗಾಧರಯ್ಯ, ಶ್ರೀ ಬಿ.ಎಸ್.ಗುಂಡುರಾವ್ ಹಾಗೂ ಶ್ರೀ ಎ.ಆರ್.ಪ್ರಸನ್ನಕುಮಾರ್ ಇವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ನಗರದಲ್ಲಿನ ಶ್ರೀ ರಾಮೇಶ್ವರ ಬಹು ಉದೇಶಿತ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ, ಕವಲೇದುರ್ಗ ಬಹು ಉದ್ದೇಶಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ, ಹೇಮಾದ್ರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ, ಸಮ್ಮಿಲನ ಕೃಷಿ ಸಂಸ್ಕರಣ ಸೌಹಾರ್ದ ಸಹಕಾರಿ ನಿ., ಕೋಟೆಗದ್ದೆ, ಸುವಿಧಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಗರ ಈ ಸಹಕಾರಿಗಳಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ಸಹಕಾರಿಯ ಆಡಳಿತ ಮಂಡಲಿಯ ವತಿಯಿಂದ ಆತ್ಮೀಯ ಸ್ವಾಗತ ಕೋರಿದರು. ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಪಡೆದರು. ಭೇಟಿಯ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಲಿಯ ಸದಸ್ಯರು, ಮುಖ್ಯಕಾರ್ಯನಿರ್ವಾಹಕರು ಹಾಜರಿದ್ದರು.
- ಶ್ರೀ ಮಂಜುನಾಥೇಶ್ವರ ಸೌಹಾರ್ದ ಸಹಕಾರಿ ನಿ., ಹಾಸನ ಮತ್ತು ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ವಾಹನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಗಳಿಗೆ ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ವೈ.ಕುಮಾರ್‌ರವರು ಭೇಟಿ ನೀಡಿ, ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು.

## ಸೌಹಾರ್ದ ಸಹಕಾರಿಗಳ ಗಮನಕ್ಕೆ
## ಸಹಕಾರಿಯ ಅಧಿಕೃತ ಶಾಖಾ ಅನುಮತಿ ಪತ್ರ ಹಾಗೂ ಇ-ಸ್ಟ್ಯಾಂಪಿಂಗ್ ಕೇಂದ್ರ ಅನುಮತಿ ಪತ್ರ

ಸೌಹಾರ್ದ ಸಹಕಾರಿಗಳ ಶಾಖೆಗಳಿಗೆ ಹಾಗೂ ಇ-ಸ್ಟ್ಯಾಂಪಿಂಗ್ ಕೇಂದ್ರಗಳಿಗೆ ಸಂಯುಕ್ತ ಸಹಕಾರಿಯ ಅಧಿಕೃತ ಶಾಖಾ ಅನುಮತಿ ಪತ್ರ ಹಾಗೂ ಇ-ಸ್ಟ್ಯಾಂಪಿಂಗ್ ಕೇಂದ್ರ ಅನುಮತಿ ಪತ್ರ ನೀಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ನಿರ್ಣಯಿಸಿದೆ.

**ಶಾಖಾ ಅನುಮತಿ ಪತ್ರ :** ಶಾಖೆಗಳನ್ನು ಹೊಂದಿರುವ ಸೌಹಾರ್ದ ಸಹಕಾರಿಗಳು ತಮ್ಮ ಸೌಹಾರ್ದ ಸಹಕಾರಿಯ ಹೆಸರು, ಶಾಖೆಯ ಹೆಸರು, ವಿಳಾಸ, ಶಾಖೆಯ ಸಂಖ್ಯೆ, ಪ್ರಾರಂಭಿಸಿದ ದಿನಾಂಕ, ದೂರವಾಣಿ ಸಂಖ್ಯೆ, ಇ-ಮೇಲ್ ಐ.ಡಿ., ಶಾಖಾ ವ್ಯವಸ್ಥಾಪಕರ ಹೆಸರು, ಮೊಬೈಲ್ ಸಂಖ್ಯೆ, ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರ ಸಂಖ್ಯೆ, ವಿವರಗಳನ್ನು ಸಂಯುಕ್ತ ಸಹಕಾರಿಗೆ ತಿಳಿಸಲು ಸೂಚಿಸಿದೆ. ವಿವರಗಳನ್ನು ಸಲ್ಲಿಸಿದ ನಂತರ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಸಂಯುಕ್ತ ಸಹಕಾರಿಯ ಕಛೇರಿಯಲ್ಲಿ ವಿವರಗಳನ್ನು ಪರಿಶೀಲಿಸಿ ದೃಢೀಕರಿಸಿದ ನಂತರ ಶಾಖಾ ಅನುಮತಿ ಪತ್ರಗಳನ್ನು ನೀಡಲಾಗುವುದು. ಶಾಖಾ ಅನುಮತಿ ಪತ್ರಗಳನ್ನು ಶಾಖೆಯಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸುವುದು.

**ಇ-ಸ್ಟ್ಯಾಂಪಿಂಗ್ ಕೇಂದ್ರ ಅನುಮತಿ ಪತ್ರ :** ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಸೌಹಾರ್ದ ಸಹಕಾರಿಗಳು ಸಹಕಾರಿಯ ಹೆಸರು, ಸಂಯುಕ್ತ ಸಹಕಾರಿಯು ಅನುಮತಿ ನೀಡಿದ ದಿನಾಂಕ, ಇ-ಸ್ಟ್ಯಾಂಪಿಂಗ್ ಕೇಂದ್ರಗಳ ವಿಳಾಸ, ಕೇಂದ್ರದ ಸಂಖ್ಯೆ, ಇ-ಮೇಲ್ ಐ.ಡಿ., ಕೇಂದ್ರದ ಅಧಿಕಾರಿ ಹೆಸರು, ಮೊಬೈಲ್ ಸಂಖ್ಯೆ, ವಿವರಗಳನ್ನು ಸಂಯುಕ್ತ ಸಹಕಾರಿಗೆ ಕಳುಹಿಸಲು ಕ್ರಮವಿಡುವುದು. ವಿವರಗಳು ಬಂದ ನಂತರ ಇ-ಸ್ಟ್ಯಾಂಪಿಂಗ್ ಕೇಂದ್ರ ಅನುಮತಿ ಪತ್ರಗಳನ್ನು ನೀಡಲಾಗುವುದು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

### ದಾವಾ ದಾಖಲಾತಿಗಳು :

ಬೆಳಗಾವಿ ವಿಭಾಗದಿಂದ 2393 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 2002 ಪ್ರಕರಣಗಳು ಸೇರಿದಂತೆ ಒಟ್ಟು 4395 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2413 ಪ್ರಕರಣಗಳು ಇತ್ಯರ್ಥಗೊಂಡಿವೆ.

### ಅಮಲ್ಜಾರಿ ಪ್ರಕರಣಗಳು :

ಒಟ್ಟು 913 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 43 ಪ್ರಕರಣಗಳು ಇತ್ಯರ್ಥಗೊಂಡಿದೆ. 814 ಪ್ರಕರಣಗಳು ಪ್ರಗತಿಯಲ್ಲಿದ್ದು, 56 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 895 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 14 ಪ್ರಕರಣಗಳು ಇತ್ಯರ್ಥಗೊಂಡಿವೆ.

## ಆಕ್ಸಿಸ್ ಬ್ಯಾಂಕ್ ವರ್ಚುವಲ್ ಅಕೌಂಟ್ ಅನ್ನು ಕಡ್ಡಾಯವಾಗಿ ಬಳಸುವಂತೆ ಸೌಹಾರ್ದ ಸಹಕಾರಿಗಳ ಇ-ಸ್ಟ್ಯಾಂಪಿಂಗ್ ಎಸಿಸಿ ಕೇಂದ್ರಗಳಿಗೆ ಸೂಚನೆ

ರಾಜ್ಯದ ಎಲ್ಲಾ ಎಸಿಸಿಗಳಿಗೆ ಕಡ್ಡಾಯವಾಗಿ ವರ್ಚುವಲ್ ಅಕೌಂಟ್ ಸಂಖ್ಯೆಯನ್ನು ಬಳಸುವಂತೆ ತಿಳಿಸಲಾಗಿದ್ದರೂ ಕೆಲವು ಎಸಿಸಿಗಳು ಇನ್ನೂ ಸಹ ವರ್ಚುವಲ್ ಅಕೌಂಟ್ ಸಂಖ್ಯೆಯನ್ನು ಬಳಸದೇ ಹಳೇ ಇ-ಸ್ಟ್ಯಾಂಪಿಂಗ್ ಖಾತೆಗೆ ಹಣ ಜಮಾ ಮಾಡುತ್ತಿರುವುದನ್ನು ಸಂಯುಕ್ತ ಸಹಕಾರಿಯು ಗಮನಿಸಿದೆ.

ಈ ಹಿನ್ನೆಲೆಯಲ್ಲಿ ಆಕ್ಸಿಸ್ ಬ್ಯಾಂಕ್ ವರ್ಚುವಲ್ ಅಕೌಂಟ್ ವ್ಯವಸ್ಥೆಯನ್ನು ಸಂಯುಕ್ತ ಸಹಕಾರಿಯು ಹೊಸದಾಗಿ ಅಳವಡಿಸಿಕೊಂಡಿರುವುದರಿಂದ ವರ್ಚುವಲ್ ಅಕೌಂಟ್ ಸಂಖ್ಯೆಯನ್ನು ಬಳಸದೇ ಇರುವ ಎಸಿಸಿ ಕೇಂದ್ರಗಳು ವರ್ಚುವಲ್ ಅಕೌಂಟ್ ಸಂಖ್ಯೆಯನ್ನು ಬಳಸಿಕೊಂಡು ಇ-ಸ್ಟ್ಯಾಂಪಿಂಗ್ ಖಾತೆಗೆ ಹಣ ಜಮಾ ಮಾಡುವಂತೆ ಕ್ರಮವಿಡಲು ಸೂಚಿಸಿದೆ.

## ಸೌಹಾರ್ದ ಸಹಕಾರಿ ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳು ಹೊಂದಿರುವ ಶಾಖೆಗಳ ನಿರ್ವಹಣೆಗೆ ಮಾದರಿ ಗೈಡ್‌ಲೈನ್ಸ್ ಸಿದ್ಧತೆಗಾಗಿ ಮಾಹಿತಿ ಸಂಗ್ರಹಣೆಗೆ ಕ್ರಮ

ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿ ಬ್ಯಾಂಕ್ ಹಾಗೂ ಸೌಹಾರ್ದ ಸಹಕಾರಿಗಳ ಆರೋಗ್ಯಕರ ಸುಸ್ಥಿರ ಬೆಳವಣಿಗೆಗೆ ಪೂರಕವಾಗಿ ಆಯ್ದ ಸೌಹಾರ್ದ ಸಹಕಾರಿ ಬ್ಯಾಂಕ್ ಹಾಗೂ ಸೌಹಾರ್ದ ಸಹಕಾರಿಗಳಿಂದ ಬ್ಯಾಂಕ್/ ಸಹಕಾರಿ ಶಾಖೆಗಳ ವ್ಯವಸ್ಥಾಪನೆ, ಆಡಳಿತ ಮತ್ತು ನಿಯಂತ್ರಣ ವ್ಯವಸ್ಥೆಗಳ ಬಗ್ಗೆ ರಚಿಸಿರುವ ಒಳ ನಿಯಮಗಳು ಹಾಗೂ ಅನುಸರಿಸುತ್ತಿರುವ ವಿಧಾನಗಳ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ, ಸಂಯುಕ್ತ ಸಹಕಾರಿಯ ಸಂಶೋಧನಾ ಹಾಗೂ ಮೌಲ್ಯಮಾಪನ ವಿಭಾಗದ ಮೂಲಕ ಅವುಗಳ ಅಧ್ಯಯನ ನಡೆಸಿ, ತಜ್ಞರ ಸಲಹೆ ಹಾಗೂ ಅಭಿಪ್ರಾಯ ಪಡೆದು ಈ ವ್ಯವಸ್ಥೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಉದ್ಧೇಶಿಸಿದೆ. ಆ ಮೂಲಕ ಸೌಹಾರ್ದ ಸಹಕಾರಿ ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳು ಹೊಂದಿರುವ ಶಾಖೆಗಳ ನಿರ್ವಹಣೆಗೆ ಮಾದರಿ ಗೈಡ್‌ಲೈನ್ಸ್ ಸಿದ್ಧತೆಗಾಗಿ ಮಾಹಿತಿ ಸಂಗ್ರಹಣೆಗೆ ಕ್ರಮವಿಡಲಾಗಿದೆ.

## ಸೌಹಾರ್ದ ಸಹಕಾರಿಗಳು ಅಳವಡಿಸಿಕೊಂಡಿರುವ ತಂತ್ರಜ್ಞಾನ ಮಾಹಿತಿ ಹಾಗೂ ಸೌಹಾರ್ದ ಸಹಕಾರಿಗಳು ನಿರ್ವಹಿಸುತ್ತಿರುವ ಸಾಮಾಜಿಕ ಕೆಲಸ ಕಾರ್ಯಗಳ ಸಮಗ್ರ ಮಾಹಿತಿ ಸಂಗ್ರಹಣೆಗೆ ಕ್ರಮ

**ತಂತ್ರಜ್ಞಾನ ಅಳವಡಿಕೆ :** ಸಹಕಾರ ಕ್ಷೇತ್ರದಲ್ಲಿ ಬದಲಾವಣೆಯ ಶಕೆಯನ್ನು ಆರಂಭಿಸಿರುವ ಶ್ರೇಯಸ್ಸು ಸೌಹಾರ್ದ ಸಹಕಾರಿಗಳದ್ದಾಗಿದ್ದು, ತಂತ್ರಜ್ಞಾನ ಅಳವಡಿಕೆಯಲ್ಲಿ ಕೂಡ ಸೌಹಾರ್ದ ಸಹಕಾರಿಗಳು ಮುಂದೆ ಇರುವುದನ್ನು ಗಮನಿಸಲಾಗಿದೆ. ತಂತ್ರಜ್ಞಾನ ಅಳವಡಿಕೆಯ ಕುರಿತಂತೆ ಸಂಯುಕ್ತ ಸಹಕಾರಿ ಕೂಡ ತಂತ್ರಜ್ಞಾನ ಮೇಳ, ತರಬೇತಿಯಲ್ಲಿ ವಿಷಯ ಅಳವಡಿಕೆ, ಕಾಮನ್ ಸಾಫ್ಟ್‌ವೇರ್, ವೆಬ್ ಪೇಜ್ ಇತ್ಯಾದಿಗಳ ಮೂಲಕ ಸೌಹಾರ್ದ ಸಹಕಾರಿಗಳಲ್ಲಿ ಅರಿವನ್ನು ಬೆಳೆಸುವ ಕಾರ್ಯ ಮಾಡುತ್ತಿದೆ. ಪ್ರಸ್ತುತ ಸೌಹಾರ್ದ ಸಹಕಾರಿಗಳು ಅಳವಡಿಸಿಕೊಂಡಿರುವ ತಂತ್ರಜ್ಞಾನಗಳ ಮಾಹಿತಿಯನ್ನು ಹೊಂದುವ ಉದ್ಧೇಶದಿಂದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ನಿಗದಿತ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಕಳುಹಿಸಲು ಸುತ್ತೋಲೆಯೊಂದಿಗೆ ಕಳುಹಿಸಲಾಗಿದ್ದು, ಸದರಿ ನಮೂನೆಯನ್ನು ದಿನಾಂಕ 11-06-2018ರೊಳಗಾಗಿ ಭರ್ತಿ ಮಾಡಿ, ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗೆ ಕಳುಹಿಸಲು ತಿಳಿಸಿದೆ.

**ಸಾಮಾಜಿಕ ಕಾರ್ಯಚಟುವಟಿಕೆಗಳು :** ಸೌಹಾರ್ದ ಸಹಕಾರಿಗಳು ಕೇವಲ ಆರ್ಥಿಕ ಉದ್ದಿಮೆಗಳಾಗದೇ, ಸಹಕಾರ ತತ್ವದ ಏಳನೇ ಅಂಶವಾದ ಸಾಮಾಜಿಕ ಬದ್ಧತೆಯನ್ನು ಕೂಡ ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ. ಆದರೆ, ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳು ಪ್ರಚಾರದ ಕೊರತೆಯಿಂದಾಗಿ ಸಮಾಜದ, ಸರ್ಕಾರದ ಗಮನ ಸೆಳೆಯಲು ಸಾಧ್ಯವಾಗುತ್ತಿಲ್ಲ.

ಸೌಹಾರ್ದ ಸಹಕಾರಿಗಳು ತಮ್ಮ ಹಣಕಾಸಿನ ವ್ಯವಹಾರಗಳ ನಡುವೆಯೂ ಮಾಡಿರಬಹುದಾದ ರಕ್ತದಾನ ಶಿಬಿರ, ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆ, ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು, ನೆರೆ ಸಂತ್ರಸ್ತರಿಗೆ ಪರಿಹಾರ, ಯೋಧರಿಗೆ ಸನ್ಮಾನಿಸುವುದು, ಸ್ವಂತ ಉದ್ಯೋಗಕ್ಕೆ ಪ್ರೋತ್ಸಾಹ, ಸ್ವಚ್ಛತಾ ಅಭಿಯಾನಗಳಂತಹ ಇನ್ನೂ ಅನೇಕ ಸಮಾಜಮುಖಿ ಕಾರ್ಯಗಳ ಕೇಂದ್ರೀಕೃತ ಮಾಹಿತಿ ಲಭ್ಯವಿಲ್ಲ.

ಇಂತಹ ಅನೇಕ ಸಾಮಾಜಿಕ ಕಾರ್ಯಚಟುವಟಿಕೆಗಳ ಕೇಂದ್ರೀಕೃತ ಮಾಹಿತಿಯನ್ನು ಹೊಂದಲು ಸಂಯುಕ್ತ ಸಹಕಾರಿಯು ಉದ್ಧೇಶಿಸಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ನಿಗದಿತ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಕಳುಹಿಸಲು ಸುತ್ತೋಲೆಯೊಂದಿಗೆ ಕಳುಹಿಸಲಾಗಿದ್ದು, ಸದರಿ ನಮೂನೆಯನ್ನು ದಿನಾಂಕ 11-06-2018ರೊಳಗಾಗಿ ಭರ್ತಿ ಮಾಡಿ, ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗೆ ಕಳುಹಿಸಲು ತಿಳಿಸಿದೆ. ವಿವಿಧ ತಂತ್ರಜ್ಞಾನ ಸಂಬಂಧಿತ ಸೇವಾ ಸಂಸ್ಥೆಗಳು ನಿರಂತರವಾಗಿ ಸಂಯುಕ್ತ ಸಹಕಾರಿಯನ್ನು ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಸಂಪರ್ಕಿಸುತ್ತಿರುತ್ತವೆ. ಅಲ್ಲದೇ, ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಪರವಾಗಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಮಟ್ಟದಲ್ಲಿ ಹಾಗೂ ಬೇರೆ ಬೇರೆ ಸಂಸ್ಥೆಗಳು, ಇಲಾಖೆಗಳೊಂದಿಗೆ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ವ್ಯವಹರಿಸಬೇಕಾಗುತ್ತದೆ.

ಇಂತಹ ಸಂದರ್ಭದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದಿಂದಾದ ಸಾಮಾಜಿಕ ಕಾರ್ಯಗಳ ಮಾಹಿತಿ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ತಂತ್ರಜ್ಞಾನ ಅಳವಡಿಕೆಯ ಮಾಹಿತಿಗಳು ಉಪಯುಕ್ತವೆನಿಸುತ್ತವೆ. ಆದಕಾರಣ, ಸಂಬಂಧಿಸಿದ ನಮೂನೆಗಳನ್ನು ಭರ್ತಿ ಮಾಡಿ ಕಳುಹಿಸುವ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಸಹಕರಿಸಲು ಕೋರಿದೆ.

ನಮೂನೆಗಳು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿರುತ್ತದೆ.

## ಸಂಯುಕ್ತ ಸಹಕಾರಿಯ ಮುಂಬರುವ ಕಾರ್ಯಕ್ರಮಗಳು

- **ಕೇಂದ್ರ ಕಛೇರಿ : 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ :** ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ 19ನೇ ತಂಡದ ತರಬೇತಿಯನ್ನು ದಿನಾಂಕ 06 ರಿಂದ 15 ಜೂನ್ 2018ರವರೆಗೆ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.
- **ಮೈಸೂರು ವಿಭಾಗ : ಆಡಳಿತ ಪರಿಣಿತಿ ತರಬೇತಿ :** ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಹಿಳಾ ಸಿಬ್ಬಂದಿಗಳಿಗಾಗಿ 2 ದಿನಗಳ "ಆಡಳಿತ ಪರಿಣಿತಿ ತರಬೇತಿ" ಕಾರ್ಯಕ್ರಮವನ್ನು ದಿನಾಂಕ 22 ಮತ್ತು 23 ಜೂನ್ 2018ರಂದು ನೈವೇದ್ಯ ಹೋಟೆಲ್, ತಾಲ್ಲೂಕು ಕಛೇರಿ ಸರ್ಕಲ್ ಹತ್ತಿರ, ಕೋರ್ಟ್ ರೋಡ್, ಉಡುಪಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿದೆ. ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಹಿಳಾ ಸಿಬ್ಬಂದಿಗಳು ಸಕ್ರಿಯವಾಗಿ ಭಾಗವಹಿಸಿ ತರಬೇತಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಲು ಕೋರಿದೆ.
- **ಮೈಸೂರು ವಿಭಾಗ : ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ :** ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಮತ್ತು ಹಾಸನ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ "ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ"ವನ್ನು ದಿನಾಂಕ 29 ಜೂನ್ 2018ರಂದು ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಮೈಸೂರು ಲೋಕಲ್ ಸೆಂಟರ್), ಎಸ್.ಪಿ. ಭಟ್ ಹಾಲ್, ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರು ಇಲ್ಲಿ ಆಯೋಜಿಸಲಾಗಿದೆ.
- **ವಿಷಯಾಧಾರಿತ ಮತ್ತು ಪತ್ತಿನ ಸೌಹಾರ್ದ ಸಹಕಾರಿಗಳಿಗೆ ವಿಶೇಷ ತರಬೇತಿ :** ಜೂನ್ ಮಾಹೆಯಲ್ಲಿ ಅಗತ್ಯತೆಗೆ ಅನುಗುಣವಾಗಿ ವಿಷಯಾಧಾರಿತ ತರಬೇತಿಯನ್ನು ಮತ್ತು ಪತ್ತಿನ ಸೌಹಾರ್ದ ಸಹಕಾರಿಗಳಿಗಾಗಿ ಎರಡು ದಿನಗಳ ವಿಶೇಷ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಲಾಗಿದೆ.
- **ವಿಭಾಗವಾರು ವಿಷಯಾಧಾರಿತ ತರಬೇತಿ :** ದಿನಾಂಕ 19, 20 & 21 ಜುಲೈ 2018ರಂದು ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವಿಭಾಗವಾರು 3 ದಿನಗಳ ವಿಷಯಾಧಾರಿತ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಲಾಗಿದೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ತರಬೇತಿ – ಜುಲೈ 07 ರಿಂದ 13ರವರೆಗೆ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬ್ಯಾಂಕುಗಳ ನೂತನ ಸಿಬ್ಬಂದಿಯವರಿಗಾಗಿ 7 ದಿನಗಳ "ಬೇಸಿಕ್ ಟ್ರೈನಿಂಗ್ ಕೋರ್ಸ್" ಅನ್ನು ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ದಿನಾಂಕ 07 ರಿಂದ 13 ಜುಲೈ 2018ರವರೆಗೆ ಆಯೋಜಿಸಲಾಗಿದೆ.

ನೂತನವಾಗಿ ನೇಮಕವಾಗಿರುವ ಸಿಬ್ಬಂದಿಯವರು ಅಥವಾ ಈಗಾಗಲೇ ನೇಮಕವಾಗಿ ತರಬೇತಿ ಹೊಂದಿರದ ಸಿಬ್ಬಂದಿಯವರು ಈ ತರಬೇತಿಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಒಂದು ಸೌಹಾರ್ದ ಸಹಕಾರಿ ಬ್ಯಾಂಕಿನಿಂದ ಕನಿಷ್ಠ 2, ಗರಿಷ್ಠ 5 ಸಿಬ್ಬಂದಿಯವರು ಭಾಗವಹಿಸಬಹುದು. ತರಬೇತಿ ಶುಲ್ಕ ಪ್ರತಿ ಶಿಬಿರಾರ್ಥಿಗೆ ರೂ.3500/–ಗಳನ್ನು (ವಸತಿ, ಊಟ–ಉಪಹಾರಗಳ ವೆಚ್ಚಕ್ಕಾಗಿ) ಹಾಗೂ ತರಬೇತಿ ಸ್ಥಳಕ್ಕೆ ಬಂದು ಹೋಗುವ ವೆಚ್ಚಗಳನ್ನು ಸೌಹಾರ್ದ ಸಹಕಾರಿ ಬ್ಯಾಂಕಿನವರು ಭರಿಸಬೇಕಾಗುತ್ತದೆ.

ಅಧ್ಯಯನ ಸಾಹಿತ್ಯ, ತಜ್ಞರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ವ್ಯವಸ್ಥೆಗಳನ್ನು, ವಿವಿಧ ಸಹಕಾರಿಗಳ ಅಧ್ಯಯನ ವ್ಯವಸ್ಥೆಯನ್ನು ಸಂಯುಕ್ತ ಸಹಕಾರಿಯು ಮಾಡುತ್ತದೆ. ಶಿಬಿರಾರ್ಥಿಗಳು ವಿವರಗಳೊಂದಿಗೆ ಅರ್ಜಿ ಭರ್ತಿ ಮಾಡಿ ಸಂಯುಕ್ತ ಸಹಕಾರಿಗೆ ದಿನಾಂಕ 30–06–2018ರ ಒಳಗಾಗಿ ಕಳುಹಿಸಲು ಕೋರಿದೆ. ಶಿಬಿರಾರ್ಥಿಗಳು ಭರ್ತಿ ಮಾಡಿ ಕಳುಹಿಸಬೇಕಿರುವ ಅರ್ಜಿ ನಮೂನೆಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿದೆ.

# ಪ್ರಗತಿ ಪ್ರೊಸೆಸ್ಸಿಂಗ್ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆ
## ಕೃಷಿ ಜಮೀನು ರೈತರ ಕೈ ತಪ್ಪದಂತೆ ಎಚ್ಚರ ವಹಿಸಿ – ಸ್ವರ್ಣವಲ್ಲಿ ಶ್ರೀ

**ಬಕ್ಕಳ :** ಬಕ್ಕಳದ ಪ್ರಗತಿ ಪ್ರೊಸೆಸ್ಸಿಂಗ್ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮವನ್ನು ಸ್ವರ್ಣವಲ್ಲಿಯ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಅಶ್ವತ್ಥ ವೃಕ್ಷವನ್ನು ನೆಡುವುದರ ಮೂಲಕ ಪ್ರಾರಂಭಿಸಿದ್ದು ವಿಶಿಷ್ಟವಾಗಿದ್ದು, ಸಂಸ್ಥೆಯ ಪ್ರಗತಿಯನ್ನು ಶ್ಲಾಘಿಸಿದ ಶ್ರೀಗಳು ಅಶ್ವತ್ಥ ವೃಕ್ಷದಂತೆ ಸಹಕಾರಿಯು ಬೃಹತ್ತಾಗಿ ಬೆಳೆಯಲಿ ಎಂದು ಹಾರೈಸಿದರು. ನಂತರ ಆಶೀರ್ವಚನ ನೀಡಿದ ಅವರು ಕೃಷಿ ಜಮೀನು ಉಳ್ಳವರ ಪಾಲಾಗುತ್ತಿದ್ದು, ಅದಕ್ಕೆ ಕಡಿವಾಣ ಹಾಕುವ ಕೆಲಸವನ್ನು ಸಹಕಾರಿಗಳು ಮಾಡಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿದ ಸಹಕಾರಿ ಧುರೀಣರು ಹಾಗೂ ಶಿರಸಿ ಟಿ.ಎಂ.ಎಸ್.ನ ಅಧ್ಯಕ್ಷರಾದ ಶ್ರೀ ಜಿ.ಎಂ.ಹೆಗಡೆ ಹುಳಗೋಳರವರು ಮಾತನಾಡಿದರು.

ಇನ್ನೋರ್ವ ಅತಿಥಿಯಾದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್. ರವಿಯವರು ಮಾತನಾಡಿ, ಸೌಹಾರ್ದ ಸಹಕಾರಿಯ ಪ್ರಯೋಜನಗಳನ್ನು ವಿವರಿಸಿ, ಸಹಕಾರವನ್ನು ನೀಡುವ



ಭರವಸೆಯನ್ನು ನೀಡಿದರು. ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ವಿಶೇಷವಾಗಿ ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ಸಹಕಾರಿಯ ಅಧ್ಯಕ್ಷರಾದ ಪ್ರೊ. ಎಂ.ಎಂ.ಹೆಗಡೆ ಬಕ್ಕಳರವರು ಎಲ್ಲರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಕಾರಿಯ ನಿರ್ದೇಶಕರಾದ ಶ್ರೀ ನರಸಿಂಹ ಹೆಗಡೆ ಬಕ್ಕಳರವರು ಕಾರ್ಯಕ್ರಮ ನಿರೂಪಿಸಿ, ಕೊನೆಯಲ್ಲಿ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದ ನಂತರ ಹಿಲ್ಲೂರು ನೇತೃತ್ವದಲ್ಲಿ ನಡೆದ ಯಕ್ಷಗಾನ "ಲವ-ಕುಶ" ಅಪಾರ ಜನ ಮನ್ನಣೆಗೆ ಪಾತ್ರವಾಯಿತು.

# ಶ್ರೀ ಮಾತಾಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಹೊಸ ಕಛೇರಿಯ ಉದ್ಘಾಟನೆ

**ಬೆಂಗಳೂರು :** ಶ್ರೀ ಮಾತಾಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ ಹೊಸ ಕಛೇರಿಯ ಉದ್ಘಾಟನೆಯನ್ನು ದಿನಾಂಕ 11.05.2018ರಂದು ಶೇಷಾದ್ರಿಪುರಂನಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ.ವಿ.ಶಾಸ್ತ್ರಿ, ನಿರ್ದೇಶಕರಾದ ಶ್ರೀ ಶ್ರೀಮಾನ್ ನಾರಾಯಣ್, ಸದಸ್ಯರಾದ ಶ್ರೀ ಪರಮಶಿವಯ್ಯ ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್.ಕೆ.ಹೆಗೆಡೆರವರು ಉಪಸ್ಥಿತರಿದ್ದರು.





# ಪೋತ್ನಾಳ ಪತ್ತಿನ ಸೌಹಾರ್ದ ಸಹಕಾರಿಯಿಂದ ನೀರಿನ ಅರವಟ್ಟಿಗೆ ವ್ಯವಸ್ಥೆ

**ಪೋತ್ನಾಳ :** ಪೋತ್ನಾಳ ಪತ್ತಿನ ಸೌಹಾರ್ದ ಸಹಕಾರಿ ನಿ., ಪೋತ್ನಾಳ ಸಹಕಾರಿ ವತಿಯಿಂದ ವಿವಿಧ ರೀತಿಯ ವ್ಯವಹಾರಕ್ಕಾಗಿ ಪೋತ್ನಾಳ ಗ್ರಾಮಕ್ಕೆ ಭೇಟಿ ನೀಡುವ ಸುಮಾರು 30ಕ್ಕೂ ಹೆಚ್ಚಿನ ಹಳ್ಳಿಯ ಜನರಿಗೆ ಬಿಸಿಲಿನ ತಾಪಮಾನ ಹೆಚ್ಚಾಗಿರುವುದರಿಂದ ನೀರಿನ ದಾಹ ನೀಗಿಸಲು ನೀರಿನ ಅರವಟ್ಟಿಗೆ ವ್ಯವಸ್ಥೆಯನ್ನು ಪ್ರಾರಂಭಿಸಿದ್ದಾರೆ. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

# 2017-18ನೇ ಸಾಲಿಗೆ ಅಂತ್ಯಗೊಂಡಿರುವ ಸೌಹಾರ್ದ ಸಹಕಾರಿಗಳ ಆರ್ಥಿಕ ಪ್ರಗತಿಯ ಅಂಕಿ-ಅಂಶಗಳು

## ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೋರಗಾಂವ

| Financial Position as on 31-03-2018 | |
|---|---|
| No. of Members | 11170 |
| Share Capital | Rs. 2 Crore 90 Lakh |
| Funds | Rs.28 Crore 49 Lakh |
| Deposits | Rs. 558 Crore |
| Loans | Rs. 351 Crore |
| Investment | Rs. 193 Crore |
| Profit | Rs. 4 Crore 5 Lakh |
| Recovery | 96% |
| Turnover (Yearly) | 2595 Crores |
| Working Capital | 593 Crore 87 Lakh |
| Branches | 1+37 |



**ಸಂಸ್ಥಾಪಕ ಅಧ್ಯಕ್ಷರು :**
'ಸಹಕಾರ ರತ್ನ' ಶ್ರೀ ರಾವಸಾಹೇಬ ಅಣ್ಣಾಸಾಹೇಬ ಪಾಟೀಲ
**ಉಪಾಧ್ಯಕ್ಷರು :**
ಶ್ರೀ ಸುಭಾಷ್ ವಿ. ಶೆಟ್ಟಿ
**ಜನರಲ್ ಮ್ಯಾನೇಜರ್ :**
ಶ್ರೀ ಅಶೋಕ ಜೆ. ಬಂಕಾಪೂರೆ
ಸಹಕಾರಿಯ ಶಾಖೆಗಳು :
*Borgaon, *Chand Shiradwad, *Manakapur, *Sadalga, *Chikodi, *Dhonewadi, *Belgaum, *Galataga, *Gokak, *Nipani,*Harugeri, *Athani, *Bhoj , *Mangur, *Stavanidhi, *Ugar Kh, *Basavan Kudchi, *Dharwad, *Hubli, *Bedkihal, *Akol, *Kognoli, *Jamakhandi, *Anagol, *Karadaga, *Mole, *Benadi, *Appachiwadi, *Hukkeri, *Yarnal, *Soundalaga, *Shirguppi, *Chinchani, *Kagawad, *Kurli, *Jatrat, *Khadaklat, *Rasai Shendur

## ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ

**ಯರಗಟ್ಟಿ :** ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ ಸಹಕಾರಿಯ 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಬಿಡುಗಡೆ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಶ್ರೀ ಕಟಕೋಳ ಸಿದ್ರಾಯಅಜ್ಜನವರು ಮಾತನಾಡಿ ಸಹಕಾರಿಗಳು ಗ್ರಾಹಕರಿಗೆ ಸಾಲ ಸದ್ಬಳಕೆಯಾಗುವ ಗುಡಿ ಕೈಗಾರಿಕೆಗಳಿಗೆ ಸಾಲ ನೀಡುವುದು ಅವಶ್ಯ ಎಂದು ತಿಳಿಸಿದರು. ವ್ಯವಸ್ಥಾಪಕರಾದ ಶ್ರೀ ಸಿ.ಎಮ್.ಕದಂರವರು ವರದಿ ವಾಚನ ಮಾಡಿದರು. ದಿವ್ಯ ಸಾನಿಧ್ಯವನ್ನು ರಾಜರಾಜೇಶ್ವರಿ ಆಶ್ರಮದ ಗಣಪತಿ ಮಹಾರಾಜರು ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ರೇವಪ್ಪ ರೆಬ್ಬನ್ನವರ, ಶ್ರೀ ರಾಮಣ್ಣ ಕಡಕೋಳ, ಶ್ರೀ ವೀರಣ್ಣ ವಕ್ಕುಂದ, ಶ್ರೀ ದತ್ತುರಾವ್ ಆ. ಕದಂ, ಶ್ರೀ ತಿಪ್ಪಣ್ಣ ಸಿಂಗಾರಗೊಪ್ಪ, ಶ್ರೀ ಪತ್ರಪ್ಪ ಹರಗೋಲ, ಶ್ರೀ ಮಹಾಂತೇಶ ಯಕ್ಕುಂಡಿ, ಶ್ರೀ ಮಲ್ಲಿಕಾರ್ಜುನ ಅಂಗಡಿ, ಶ್ರೀ ನಿಂಗಪ್ಪ ಪೋಜೆರ, ಶ್ರೀ ಲಕ್ಕಪ್ಪ ಹಿರಗಣ್ಣವರ, ಶ್ರೀ ಫಕ್ಕೀರಪ್ಪ ಸುಣದೋಳಿ, ಶ್ರೀ ನಿಂಗಪ್ಪ ತಳನಟ್ಟಿ, ಶ್ರೀ ರವಿ ಲಕ್ಷೆಟ್ಟಿ, ಶ್ರೀ ನಾಗಪ್ಪ ಕಟಗಿ, ಶ್ರೀ ಸಂಬಾಜಿ ಕದಂ, ಮುಂತಾದವರು ಉಪಸ್ಥಿತರಿದ್ದರು. ಸಹಕಾರಿಯ 2017–18ನೇ ಸಾಲಿನ ಆರ್ಥಿಕ ಪ್ರಗತಿಯ ಅಂಕಿ–ಅಂಶಗಳು ಈ ಕೆಳಗಿನಂತಿವೆ;



| | |
|---|---|
| ಒಟ್ಟು ಸದಸ್ಯರು | 888 |
| ಶೇರು ಬಂಡವಾಳ | ರೂ.1075600 |
| ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು | ರೂ.533848.20 |
| ಠೇವಣಿಗಳು | ರೂ.24357722 |
| ಸಾಲ ಮತ್ತು ಮುಂಗಡಗಳು | ರೂ.19801760 |
| ದುಡಿಯುವ ಬಂಡವಾಳ | ರೂ.28242436 |
| ಬ್ಯಾಂಕ್ ಬ್ಯಾಲೆನ್ಸ್ | ರೂ.4270557 |
| ಹೂಡಿಕೆಗಳು | ರೂ.2293501 |
| ನಿವ್ವಳ ಲಾಭ | ರೂ.369419.44 |
| ಒಟ್ಟು ವ್ಯವಹಾರ | ರೂ.151897935 |

# ಶ್ರೀ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಮಾಂಜರಿ

**ಮಾಂಜರಿ :** ಗ್ರಾಮೀಣ ಪ್ರದೇಶದಲ್ಲಿ ಅಗ್ರಮಾನ್ಯ ಸಹಕಾರಿ ಎಂದು ಬೆಳಗಾವಿ ಜಿಲ್ಲೆಯಲ್ಲಿ ಹೆಸರು ಪಡೆದಿರುವ ಶ್ರೀ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಮಾಂಜರಿ ಸಹಕಾರಿಯು ಸನ್ 2017–18ನೇ ಸಾಲಿನಲ್ಲಿ ರೂ.2,90,00,000/– ಲಾಭ ಗಳಿಸುವುದರೊಂದಿಗೆ ಶೇ.98ರಷ್ಟು ಸಾಲ ವಸೂಲು ಮಾಡಿ ದಾಖಲೆ ನಿರ್ಮಿಸಿದೆ.

ಗ್ರಾಮೀಣ ಜನತೆಯ ಅದರಲ್ಲೂ ರೈತ ಬಾಂಧವರ ಆರ್ಥಿಕ ಸ್ಥಿತಿ ಉತ್ತಮಗೊಳಿಸುವ ದೃಢಸಂಕಲ್ಪದೊಂದಿಗೆ ಸೇವೆ ಸಲ್ಲಿಸುತ್ತಾ ಅಭಿವೃದ್ಧಿ ಪಥದಲ್ಲಿ ಮುಂದುವರೆದಿದೆ. ಸಹಕಾರಿಯು 6255 ಶೇರು ಸದಸ್ಯರನ್ನು ಹೊಂದಿದ್ದು, ಶೇರು ಬಂಡವಾಳ ರೂ.56,44,000/– ಹಾಗೂ ಠೇವಣಿಗಳು ರೂ.148,25,00,000/– ಸಂಗ್ರಹವಾಗಿದ್ದು, ರೂ.94,42,00,000/– ಸಾಲ ವಿತರಿಸಲಾಗಿದೆ. ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿ ರೂ.10,62,00,000/– ಜಮಾ ಇರುತ್ತದೆ. ಸಹಕಾರಿಯ ಹೆಸರಿನಿಂದ ಗುಂತಾವಣೆ ರೂ.53,21,00,000/– ಮಾಡಿದೆ. ಮಾಂಜರಿ ಗ್ರಾಮದಲ್ಲಿ ಭವ್ಯವಾದ ಪ್ರಧಾನ ಕಛೇರಿ ಹೊಂದಿದ್ದು, ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಒಟ್ಟು 24 ಶಾಖೆಗಳು ಕೆಲಸ ನಿರ್ವಹಿಸುತ್ತಾ ಗ್ರಾಹಕರಿಗೆ ತ್ವರಿತಗತಿಯಲ್ಲಿ ಸೇವೆ ಸಲ್ಲಿಸುತ್ತಿವೆ. ಸಹಕಾರಿಯ ಪ್ರಗತಿಗೆ ಸಹಕಾರಿಯ ಸಂಸ್ಥಾಪಕರಾದ ಶ್ರೀ ಕಲ್ಲಪ್ಪಣ್ಣಾ ಪಾರಿಸಾ ಮಗೆಣ್ಣವರ, ಮಾನ್ಯ ಮಾಜಿ ಶಾಸಕರು ಹಾಗೂ ಅಧ್ಯಕ್ಷರಾದ ಶ್ರೀ ಜಿನ್ನಪ್ಪಾ ಆದಪ್ಪಾ ಶೇಡಬಾಳೆ ಹಾಗೂ ಉಪಾಧ್ಯಕ್ಷರಾದ ಶ್ರೀ ಅಶೋಕ ತುಕಾರಾಮ ಚಿಮಾಯಿ ಇವರ ಮಾರ್ಗದರ್ಶನ ಹಾಗೂ ನಿರ್ದೇಶಕರ ಮಂಡಲಿಯ ನಿಸ್ವಾರ್ಥ ಸೇವೆ, ಸದಸ್ಯರ, ಗ್ರಾಹಕರ ಅಭಿಮಾನ ಮತ್ತು ಎಲ್ಲಾ ಶಾಖಾ ವ್ಯವಸ್ಥಾಪಕರು ಹಾಗೂ ಎಲ್ಲಾ ಸಿಬ್ಬಂದಿಗಳ ಸೇವಾ ಮನೋಭಾವವೇ ಪ್ರಗತಿಗೆ ಕಾರಣವೆಂದು ಪ್ರಧಾನ ವ್ಯವಸ್ಥಾಪಕರಾದ ಶ್ರೀ ಸಾಗರ ಕಲ್ಲಪ್ಪಾ ಮಂಗಸೂಳೆ ಹಾಗೂ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾವಸಾಬ ಮಹಾದೇವ ಕೋಳಿವಾಲೆ ಇವರು ತಿಳಿಸಿರುತ್ತಾರೆ.



ಶ್ರೀ ಕಲ್ಲಪ್ಪಣ್ಣಾ ಪಾರಿಸಾ ಮಗೆಣ್ಣವರ
ಸಂಸ್ಥಾಪಕರು



ಶ್ರೀ ಜಿನ್ನಪ್ಪಾ ಆದಪ್ಪಾ ಶೇಡಬಾಳೆ
ಅಧ್ಯಕ್ಷರು

| ಶುಭಮಂಗಳಾ ಮಹಿಳಾ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೋಕಾಕ | |
|---|---|
| ಶೇರು ಬಂಡವಾಳ | ರೂ.5,07,250 |
| ಠೇವಣಿಗಳು | ರೂ.95,11,597 |
| ಸಾಲಗಳು | ರೂ.1,11,90,661 |
| ನಿಧಿಗಳು | ರೂ.13,69,814 |
| ದುಡಿಯುವ ಬಂಡವಾಳ | ರೂ.1,16,12,777 |
| ಒಟ್ಟು ವ್ಯವಹಾರ | ರೂ.3,62,23,897 |
| ನಿವ್ವಳ ಲಾಭ | ರೂ.67,355 |

ಭಾರತ ಸರ್ಕಾರದ ರಾಷ್ಟ್ರೀಯ ಪ್ರಶಿಕ್ಷಣ ಪರಿಷತ್, ನವದೆಹಲಿ ಇವರು ನಡೆಸಿದ "ಹೈಯರ್ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್" ಪರೀಕ್ಷೆಯಲ್ಲಿ ತುಮಕೂರಿನ ಬೆಳ್ಳಾವಿಯ ಅರಿವಿನ ಮನೆ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಶಿಧರ್.ಸಿ.ಜೆ.ರವರು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ.



ಶ್ರೀ ಶಶಿಧರ್ ಸಿ.ಜೆ.

## ಅಧ್ಯಕ್ಷರು–ಉಪಾಧ್ಯಕ್ಷರ ಆಯ್ಕೆ
## ಶ್ರೀ ಸಿದ್ದೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸುಣದೋಳಿ



ಶ್ರೀ ಪವಾಡಿ ಸಿ. ದೇವರಮನಿ
ಮಾನ್ಯ ಅಧ್ಯಕ್ಷರು



ಶ್ರೀ ರಾಮಪ್ಪ ಬಾ. ಬೆಣ್ಣಿ
ಮಾನ್ಯ ಉಪಾಧ್ಯಕ್ಷರು

## ಫ್ಲೋರ್‌ಸರ್ವ್ ಎಂಪ್ಲಾಯಿಸ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು.



ಶ್ರೀ ಬಸವರಾಜಪ್ಪ ಡಿ.ಬಿ
ಮಾನ್ಯ ಅಧ್ಯಕ್ಷರು



ಶ್ರೀ ವಿಷ್ಣುರಾಜ ಕೆ
ಮಾನ್ಯ ಉಪಾಧ್ಯಕ್ಷರು

## ವಿಶೇಷ ಸಹಕಾರಿ ಸಂಸ್ಥೆಗಳ ಅಧ್ಯಯನ

**ಶ್ರೀಲಂಕಾ :** ಸಿಕ್‌ಟ್ಯಾಬ್–ಸೆಂಟರ್ ಫಾರ್ ಇಂಟರ್ ನ್ಯಾಷನಲ್ ಕೋ–ಆಪರೇಷನ್ ಅಂಡ್ ಟ್ರೈನಿಂಗ್ ಇನ್ ಅಗ್ರಿಕಲ್ಚರಲ್ ಬ್ಯಾಂಕಿಂಗ್, ಪುಣೆ, ಮಹಾರಾಷ್ಟ್ರ ಹಾಗೂ ಎನ್.ಐ.ಸಿ.ಡಿ. – ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಡೆವಲಪ್‌ಮೆಂಟ್, ಪಲಗೋಲ, ಶ್ರೀಲಂಕಾ ಮತ್ತು ವಾಮ್ನಿಕಾಮ್ – ವೈಂಕುಠ ಮೆಹ್ತ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಪುಣೆ ಇವರ ಜಂಟಿ ಸಹಯೋಗದಲ್ಲಿ ನಾಲ್ಕು ದಿನಗಳ ಶ್ರೀಲಂಕಾ ದೇಶದ ವಿಶೇಷ ಸಹಕಾರಿ ಸಂಸ್ಥೆಗಳ ಅಧ್ಯಯನವನ್ನು ದಿನಾಂಕ 14 ರಿಂದ 18 ಮೇ 2018ರವರೆಗೆ ಆಯೋಜಿಸಲಾಗಿತ್ತು. ಈ ಅಧ್ಯಯನದಲ್ಲಿ ದಿ ಶಿರಾ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ಲಿ., ಶಿರಾ ಸಹಕಾರಿಯ ನಿರ್ದೇಶಕರಾದ ಶ್ರೀ ಡಿ.ಕುಮಾರಸ್ವಾಮಿಯವರು ಕರ್ನಾಟಕ ರಾಜ್ಯದಿಂದ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ದಿನಾಂಕ 14 ರಿಂದ 18 ಮೇ 2018ರವರೆಗೆ ಶ್ರೀಲಂಕಾ ದೇಶದ 6 ಅತ್ಯುತ್ತಮ ಸಹಕಾರಿ ಸಂಸ್ಥೆಗಳಿಗೆ ಅಧ್ಯಯನ ಭೇಟಿ ನೀಡಿ, ಅಧ್ಯಯನ ನಡೆಸಿ, ಅಭಿಪ್ರಾಯವನ್ನು ಹಂಚಿಕೊಂಡಿರುತ್ತಾರೆ. ಸೂಕ್ತ ಸಲಹೆ ಹಾಗೂ ಮಾರ್ಗದಶನವನ್ನು ನೀಡಿರುತ್ತಾರೆ. ಈ ಅಧ್ಯಯನ ತಂಡದಲ್ಲಿ ಸಾರ್ಕ್ ದೇಶಗಳಾದ (ಭಾರತ, ನೇಪಾಳ, ಶ್ರೀಲಂಕಾ, ಬಾಂಗ್ಲಾದೇಶ, ಭೂತಾನ್, ಮಾಲ್ಡೀವ್ಸ್) ಭಾರತ, ನೇಪಾಳ, ಶ್ರೀಲಂಕಾದಿಂದ ಸುಮಾರು 29 ಸಹಕಾರಿಗಳು ಭಾಗವಹಿಸಿದ್ದರು. ದಿನಾಂಕ 18 ಮೇ 2018ರಂದು ಸಂಜೆ ಶ್ರೀಲಂಕಾ ದೇಶದ ಸಹಕಾರಿ ಕಮೀಷನರ್‌ರವರಿಂದ ಪ್ರಮಾಣ



ಪತ್ರವನ್ನು ವಿತರಿಸಲಾಯಿತು. ಡಾ॥ ರವಿ, ಕೋ–ಆರ್ಡಿನೇಟರ್, ಸಿಕ್‌ಟ್ಯಾಬ್ ಇವರು ಮಾರ್ಗದರ್ಶನ ಮಾಡಿದರು.

1) ಗಲಗೆದರ ಮಲ್ಟಿಪರ್ಪಸ್ ಕೋಆಪರೇಟಿವ್ ಲಿ., 2) ಸೆಂಟ್ರಲ್ ಪ್ರಾವಿನ್ಸ್ ಕೋಆಪರೇಟಿವ್ ಡಿಪಾರ್ಟ್‌ಮೆಂಟ್, 3) ಗಂಫ ಡಿಸ್ಟ್ರಿಕ್ಟ್ ಕೋಆಪರೇಟಿವ್ ಯೂನಿಯನ್ ಬ್ಯಾಂಕ್ ಲಿಮಿಟೆಡ್, 4) ಕುರುನೆಗಲ ಕೋ–ಆಪರೇಟಿವ್ ಹಾಸ್ಪಿಟಲ್ ಲಿಮಿಟೆಡ್, 5) ನ್ಯಾಷನಲ್ ಕೋಆಪರೇಟಿವ್ ಕೌನ್ಸಿಲ್, ಶ್ರೀಲಂಕಾ, 6) ಸನಸ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್, ಗಂಫನಗರ ಈ ಎಲ್ಲಾ ಅತ್ಯುತ್ತಮ ಸಹಕಾರಿ ಸಂಸ್ಥೆಗಳಿಗೆ ಭೇಟಿ ನೀಡಲಾಯಿತು. ಶ್ರೀಲಂಕಾ ದೇಶದಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆ ಇದ್ದು, ಆಡಳಿತಾತ್ಮಕ ಸುವ್ಯವಸ್ಥೆಗಾಗಿ 9 ರಾಜ್ಯಗಳಿದ್ದು, ಶ್ರೀಲಂಕಾದ ರಾಜಧಾನಿಯು ಕೊಲಂಬೋ ಆಗಿದೆ. ಪ್ರವಾಸೋದ್ಯಮ, ಮೀನುಗಾರಿಕೆ, ಚಹಾ ತೋಟಗಳು, ತೆಂಗು, ಹಲಸು, ಮಾವು, ಅಡಿಕೆ ಇವು ಅತ್ಯಂತ ಪ್ರಮುಖ ಬೆಳೆಗಳಾಗಿರುತ್ತವೆ. ಶ್ರೀಲಂಕಾದಲ್ಲಿ ಸಹಕಾರ ಕ್ಷೇತ್ರವು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

## ಯಶಸ್ವಿನಿ ಯೋಜನೆ ಮುಂದುವರಿಕೆ




**ಬೆಂಗಳೂರು :** ಯಶಸ್ವಿನಿ ಯೋಜನೆಯನ್ನು ಮತ್ತೆ ಮುಂದುವರಿಸಲು ದಿನಾಂಕ 30 ಮೇ 2018ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ರಾಜ್ಯದ 1.34 ಕೋಟಿ ಜನರಿಗೆ ಆರೋಗ್ಯ ಸೌಲಭ್ಯ ಕಲ್ಪಿಸಲು 'ಆರೋಗ್ಯ ಕರ್ನಾಟಕ' ಯೋಜನೆ ಜಾರಿಗೆ ತರಲು ಹಿಂದಿನ ಸರಕಾರ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಯಶಸ್ವಿನಿ ಯೋಜನೆಯನ್ನು ದಿನಾಂಕ 31 ಮೇ 2018ರವರೆಗೆ ಮಾತ್ರ ಮುಂದುವರಿಸಲು ಸರಕಾರ ಆದೇಶ ಹೊರಡಿಸಿತ್ತು. ಯಶಸ್ವಿನಿ ಯೋಜನೆಯನ್ನು ಮುಂದುವರೆಸುವಂತೆ ಸಾರ್ವಜನಿಕರಿಂದ ಒತ್ತಡ ಹೆಚ್ಚಿದ ಹಿನ್ನೆಲೆಯಲ್ಲಿ ಹಾಗೂ 'ಆರೋಗ್ಯ ಕರ್ನಾಟಕ' ಯೋಜನೆಯಲ್ಲಿ ಸಾರ್ವಜನಿಕರು ಇನ್ನೂ ತಮ್ಮ ಹೆಸರನ್ನು ನೋಂದಣಿ ಮಾಡಿಕೊಳ್ಳದ ಕಾರಣ ಯಶಸ್ವಿನಿ ಯೋಜನೆಯನ್ನು ಮುಂದುವರೆಸಲು ಸಂಪುಟ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಯಶಸ್ವಿನಿ ಯೋಜನೆಯಲ್ಲಿ ಅರ್ಹ ಫಲಾನುಭವಿಗಳು ಸಮೀಪ ಇರುವಂತಹ ಯಾವುದಾದರೂ ಸಹಕಾರಿ ಸಂಸ್ಥೆಗಳಲ್ಲಿ ತಮ್ಮ ಹೆಸರು ನೋಂದಾಯಿಸಿ ಕಾರ್ಡ್ ಪಡೆದು ಸವಲತ್ತು ಇರುವ ಖಾಸಗಿ ಆಸ್ಪತ್ರೆಗಳಲ್ಲೂ ಚಿಕಿತ್ಸೆ ಪಡೆಯಬಹುದಾಗಿತ್ತು. ಯಶಸ್ವಿನಿ ಯೋಜನೆಯಡಿ ವಾರ್ಷಿಕ ಕಡಿಮೆ ವಂತಿಗೆ ಪಾವತಿಸಿ, ಸೇವೆಗಳನ್ನು ಪಡೆಯುತ್ತಿದ್ದರು.

# ಕಂಪ್ಯೂಟರೀಕರಣದ ಮಹತ್ವದ ಕುರಿತು ತರಬೇತಿ ಕಾರ್ಯಾಗಾರ

**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಮತ್ತು ಅಟೋಮೇಷನ್ ಇನ್ಫೊ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ಮಂಗಳೂರು ಇವರ ಜಂಟಿ ಆಶ್ರಯದಲ್ಲಿ ಸಹಕಾರಿ ರಂಗದಲ್ಲಿ ಕಂಪ್ಯೂಟರೀಕರಣದ ಮಹತ್ವದ ಕುರಿತು ತರಬೇತಿ ಕಾರ್ಯಾಗಾರವು ಉಡುಪಿಯ ಡಯಾನಾ ಹೋಟೇಲಿನ ಎ.ಸಿ. ಸಭಾಂಗಣದಲ್ಲಿ ದಿನಾಂಕ 02-06-2018ರಂದು ನಡೆಯಿತು. ಉದ್ಘಾಟನೆಯನ್ನು ಶ್ರೀ ಕೆ.ರವಿರಾಜ್ ಹೆಗ್ಡೆ, ಅಧ್ಯಕ್ಷರು, ದ. ಕ. ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟ ನಿ., ಮಂಗಳೂರು ಇವರು ನೆರವೇರಿಸಿ ಕಂಪ್ಯೂಟರೀಕರಣದ ಬ್ಯಾಂಕಿಂಗ್‌ನಿಂದಾಗಿ ಸದಸ್ಯರಿಗೆ ಸಮಯದ ಉಳಿತಾಯವಾಗುತ್ತದೆ ಎಂದು ತಿಳಿಸಿದರು. ಮುಖ್ಯ ಅಥಿತಿಗಳಾದ ಶ್ರೀ ನವೀನ್‌ಚಂದ್ರ ಭಂಡಾರಿ, ಅಧ್ಯಕ್ಷರು, ಸವಿತಾ ಸಮಾಜ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಅಂಬಲಪಾಡಿ ಇವರು ಮಾತನಾಡಿ ಸಹಕಾರಿಗಳು ಜನರಿಗೆ ಹತ್ತಿರವಾದ ಸಂಸ್ಥೆಗಳು ಎಂದು ತಿಳಿಸಿದರು.

ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಮಂಜುನಾಥ.ಎಸ್.ಕೆ., ಅಧ್ಯಕ್ಷರು, ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಹಾಗೂ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಮಾತನಾಡಿ ತಂತ್ರಜ್ಞಾನದಿಂದಾಗಿ ಅಭಿವೃದ್ಧಿ ಸಾಧ್ಯ ಮತ್ತು ಸಹಕಾರಿಗಳು ತಂತ್ರಜ್ಞಾನಕ್ಕೆ ಒಳಪಡುವರೆಂದು ತಿಳಿಸಿದರು, ನಂತರ ಮಾತನಾಡಿದ ಶ್ರೀ ಗುರುಪ್ರಸಾದ ಬಂಗೇರ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ವಿಭಾಗ ಇವರು ಸಂಸ್ಥೆಗಳು ಸದೃಢಗೊಳ್ಳಲು ವಿಶೇಷ ತಂತ್ರಜ್ಞಾನಗಳು ಅಗತ್ಯವೆಂದರು.



ಸಭೆಯಲ್ಲಿ ಶ್ರೀ ಭುವನೇಶ್ ಪ್ರಭು, ಮುಖ್ಯಕಾರ್ಯನಿರ್ವಾಹಕರು, ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ, ಶ್ರೀ ಬಿ. ಮಧುಸೂದನ ನಾಯಕ್, ಉಪಾಧ್ಯಕ್ಷರು, ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ, ಅಟೋಮೇಷನ್ ಇನ್ಫೊ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷರಾದ ಶ್ರೀ ಲೋಕೇಶ್ ಎನ್, ಒಕ್ಕೂಟದ ನಿರ್ದೇಶಕರಾದ ಶ್ರೀ ನಾಗರಾಜ್, ಶ್ರೀ ಮೋಹನ್ ಉಪಾಧ್ಯ, ಶ್ರೀ ಪ್ರಕಾಶ್ ಕೋಟ್ಯಾನ್, ಶ್ರೀ ಸುರೇಶ್ ಎನ್, ಶ್ರೀ ಜಗದೀಶ ರಾಮ್ ಮತ್ತು ಅಟೋಮೇಷನ್ ಕಂಪನಿಯ ಸಾಫ್ಟ್‌ವೇರ್ ತಂತ್ರಜ್ಞಾನ ಅಧಿಕಾರಿಗಳು, 200ಕ್ಕೂ ಅಧಿಕ ಸಹಕಾರಿಗಳು ಉಪಸ್ಥಿತರಿದ್ದರು.

ಸ್ವಾಗತವನ್ನು ಒಕ್ಕೂಟದ ನಿರ್ದೇಶಕರಾದ ಶ್ರೀ ಬಿ.ಎಚ್.ಶೆಟ್ಟಿಗಾರ್ ಇವರು, ಧನ್ಯವಾದವನ್ನು ಒಕ್ಕೂಟದ ನಿರ್ದೇಶಕರಾದ ಶ್ರೀ ವಿನಾಯಕ ರಾವ್ ಇವರು ನೆರವೇರಿಸಿದರು. ಕಾರ್ಯಕ್ರಮ ನಿರ್ವಹಣೆಯನ್ನು ಶ್ರೀ ಬಿ. ಅನಂತರಾಮ ಭಟ್ ಇವರು ನೆರವೇರಿಸಿದರು.

# ಸಿಬ್ಬಂದಿಗಳ ವಾರ್ಷಿಕ ಸಭೆ

**ಹೊನ್ನಾವರ :** ಯು. ಕೆ. ಸೌಹಾರ್ದ ಕ್ರೆಡಿಟ್ ಕೋ - ಆಪರೇಟಿವ್ ಲಿ., ಯಲ್ಲಾಪುರ ಸಹಕಾರಿಯ ಹೊನ್ನಾವರ ಶಾಖೆಯಲ್ಲಿ ದಿನಾಂಕ : 26-05-2018ರಂದು ಸಿಬ್ಬಂದಿಗಳ ವಾರ್ಷಿಕ ಸಭೆಯನ್ನು ನಡೆಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಮೋದ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸಿ, ಚರ್ಚಿಸತಕ್ಕ ವಿಷಯಗಳ ಜೊತೆಗೆ ಸಹಕಾರಿಯ ಅಭಿವೃದ್ಧಿ ಹಾಗೂ ತಮ್ಮ ಅನುಭವಗಳನ್ನು ಸಂಕ್ಷಿಪ್ತವಾಗಿ ಸಹಕಾರಿಯ ಸಿಬ್ಬಂದಿಗಳಿಗೆ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಕೃಷ್ಣ ಮೂರ್ತಿ ಹೆಗಡೆ ಶಿವಾನಿರವರು ಆಗಮಿಸಿ, ಸಿಬ್ಬಂದಿಗಳಿಗೆ ಅವಶ್ಯಕ ಮಾಹಿತಿಯನ್ನು ನೀಡಿದರು. ಸಹಕಾರಿಯ ಲೆಕ್ಕಪರಿಶೋಧಕರಾದ ಶ್ರೀ ಎಸ್.ಜಿ.ಹೆಗಡೆ, ಶಿರಸಿ



ಇವರು ಅನುತ್ಪಾದಕ ಆಸ್ತಿ (ಎನ್.ಪಿ.ಎ.) ಇದರ ಬಗ್ಗೆ ಸಿಬ್ಬಂದಿಗಳಿಗೆ ಹೆಚ್ಚಿನ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಸಲಹೆಗಾರರಾದ ಶ್ರೀ ಪಿ.ಜಿ.ಹೆಗಡೆ ಕಳಚೆ, ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರು, ಸಲಹಾ ಸಮಿತಿ ಅಧ್ಯಕ್ಷರು ಮತ್ತು ಪ್ರಧಾನ ವ್ಯವಸ್ಥಾಪಕರನ್ನೊಳಗೊಂಡ ಸಿಬ್ಬಂದಿಗಳು ಉಪಸ್ಥಿತರಿದ್ದರು.



# ರಾತ್ರಿ ಮೂರಾಯ್ತು ಹೊರಡೆನೆ ತೆರಳದೊಡೆ, ಪಾರುಪತ್ಯದವನು ಮೆಚ್ಚುವನು

ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಅಖಂಡ ವಿಶ್ವದ ಅನಿಯಂತ್ರಿತ ಹಾಗೂ ಸರ್ವತಂತ್ರ ಸ್ವತಂತ್ರ ಕರ್ತನಾದ ಭಗವಂತನು ತನ್ನ ಪ್ರಿಯ ಆಟಿಕೆಗಳಾದ ಮಾನವರುಗಳನ್ನು ಸೇರ್ಪಡೆ ಮಾಡುವ ಇಲ್ಲವೇ ಬೇರ್ಪಡೆ ಮಾಡುವ ಪರಮಾಧಿಕಾರಿವನ್ನು ತನ್ನ ಸುಪರ್ದಿನಲ್ಲಿರಿಸಿಕೊಂಡಿದ್ದಾನೆ ಹಾಗೂ ಜನನ ಮರಣಗಳು ಅನುಕ್ರಮವಾಗಿ ಸೇರ್ಪಡೆ ಹಾಗೂ ಬೇರ್ಪಡೆಗಳಾಗಿ ಒದಗಿಬರುತ್ತವೆಯೆಂದು ವೇದೋಕ್ತ ಗ್ರಂಥಗಳು ಉವಾಚಿಸುತ್ತವೆ.

ಐಹಿಕ ಹಾಗೂ ಆಧ್ಯಾತ್ಮಿಕ ಜೀವಿಗಳಾಗಿದ್ದ ಡಿ.ವಿ.ಜಿ.ಯವರು ಬರೆದಿರುವ ಈ ಕೆಳಗಿನ ಪದ್ಯವು ಮಾನವನ ಜೀವನವನ್ನು ಒಂದು ಯಾತ್ರೆಯೆಂದು, ನಾವುಗಳು ಯಾತ್ರಿಕರೆಂದೂ ಈ ಜಗತ್ತೇ ಒಂದು ವಿಶಾಲ ಯಾತ್ರಾ ಸ್ಥಳವೆಂದು ವಿವರಿಸುತ್ತಾ, ಇಲ್ಲಿಗೆ ಬಂದವರು ಹೆಚ್ಚು ಕಾಲವಿರಲು ಸಾಧ್ಯವಿಲ್ಲವೆಂದು, ನಿಗದಿಪಡಿಸಿದ ಅವಧಿ ಮುಗಿದೊಡನೆ ಜಗದ ತ್ಯಾಗ ಮಾಡಬೇಕೆಂದು ಹಾಗೂ ಮಾಡಿದರೆ ಸರ್ವಶಕ್ತ ಭಗವಂತನಿಗೆ ಸಂತಸವಾಗುತ್ತದೆಂದು ವಿವರಿಸುತ್ತಾ ಹಾಗೆ ಮಾಡದಿದ್ದರೆ, ಬಲವಂತವಾಗಿ ಕಿತ್ತೆಸೆಯುತ್ತಾನೆಂಬ ಅಂಶವನ್ನು ಬಹು ಆಕರ್ಷಕವಾಗಿ ಕಣ್ಮುಂದೆ ತಂದಿದ್ದಾರೆ.

**ಪದ್ಯದ ಓಟ ಹೀಗಿದೆ :**

**"ಯಾತ್ರಿಕರು ನಾವು ದಿವ್ಯಕ್ಷೇತ್ರವೀ ಲೋಕ,**
**ಸತ್ರದಲಿ, ನೇಮದಿಂದಿರಲಿಕೆಡೆಯುಂಟು,**
**ರಾತ್ರಿ ಮೂರಾಯ್ತು ಹೊರಡೆನೆ ತೆರಳದೊಡೆ, ಪಾರು**
**ಪತ್ಯದವನು ಮೆಚ್ಚುವನು-ಮಂಕುತಿಮ್ಮ"**

ಇದೊಂದು ಸಾರ್ಥಕ ಬದುಕಿನ ಪರಿಕಲ್ಪನೆ. ಇಲ್ಲಿ ಬಳಕೆಯಾಗಿರುವ ಯಾತ್ರೆ, ಯಾತ್ರಾಸ್ಥಳ ಹಾಗೂ ನಿರ್ಧರಿತ ಸಮಯಕ್ಕೆ ಜಗದ ತ್ಯಾಗ ಮಾಡುವ ಅಂಶ ಪಾರುಪತ್ಯದವನಿಗೆ ಮೆಚ್ಚುಗೆ ತರುತ್ತದೆಂಬ ಉಪಮೆ ಅನುಪಮವಾಗಿದೆ.

ಮಗುವಿನಿಂದ ಹಿರಿಯರೆನಿಸಿಕೊಂಡವರಿಗೆಲ್ಲಾ ಪ್ರವಾಸ ಹೋಗುವುದೆಂದರೆ ಸಂತಸ ತರುವ ವಿಷಯವೇ. ಹೋದವರು ಸ್ವಂತ ಊರಿಗೆ ಹಿಂತಿರುಗಬೇಕಾದಾಗ, ಹೋಗಿರುವ ಸ್ಥಳವನ್ನು ತ್ಯಜಿಸಿ, ಸ್ವಸ್ಥಾನಕ್ಕೆ ಬರಲೇಬೇಕೆಂಬುದು ಕಠೋರನಿಯಮ. 'ಜಾತಸ್ಯ ಮರಣಂ ಧೃವಂ' ಎಂಬ ಲೋಕೋಕ್ತಿ ಆತ್ಮ ಅಮರನಾದರೂ ದೇಹನಾಶಕ್ಕೊಳಪಡತಕ್ಕದೆಂಬ ಅಂಶವನ್ನು ಬಿತ್ತರಿಸುತ್ತದೆ.

ಲೌಕಿಕದ ಪ್ರವಾಸಕ್ಕಿಂತಲೂ ತೀರ್ಥಯಾತ್ರೆಯೆಂದರೆ, ಬದಲಾದ ಸ್ಥಳದ ದರ್ಶನವಲ್ಲದೇ, ದೈವದರ್ಶನ, ಪ್ರಸಾದ ಸ್ವೀಕಾರ, ನೂತನ ದೃಶ್ಯಾವಳಿಗಳ ಅವಲೋಕನಗಳಿರುವುದರಿಂದ ನಮ್ಮಗಳ ಪಾಪಪುಣ್ಯಗಳು ಕರಗಿ ಪುಣ್ಯದ ಖಾತೆ ತೆರೆಯುತ್ತದೆಂಬ ಗ್ರಹಿಕೆಯಿರುತ್ತದೆ. ನಮ್ಮಲ್ಲಿ ಬಹಳಷ್ಟು ಜನರು ಉಡುಪಿ, ಹೊರನಾಡು, ಧರ್ಮಸ್ಥಳ, ಸುಬ್ರಹ್ಮಣ್ಯ, ಶೃಂಗೇರಿ, ತಿರುಪತಿ, ನಂಜನಗೂಡು, ಮೈಸೂರು, ಬಾದಾಮಿ, ಸವದತ್ತಿ, ಕೊಲ್ಲೂರು ಇತ್ಯಾದಿ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡಿದ ಅನುಭವವಿರುತ್ತದೆ. ಅಲ್ಲಿಗೆ ಹೋದಾಗ ಇರಲು ಅವಕಾಶ ನೀಡುವ ಅವಧಿ ಎರಡು ಅಥವಾ ಮೂರುದಿನ ಹಾಗೂ ಅಲ್ಲಿರುವಾಗ ನಿಯಮ, ಸದಾಚಾರಗಳಿಂದಿರಬೇಕೆಂಬ ನಿಯಮವಿರುವ ಅಂಶ ಎಲ್ಲರಿಗೂ ವೇದ್ಯ. ಈ ನಿಯಮವನ್ನು ಪಾಲಿಸಿದರೆ ಆ ಕ್ಷೇತ್ರದ ಪಾರುಪತ್ಯದಾರರಿಗೆ ಅಂದರೆ ಮೇಲ್ವಿಚಾರಕರಿಗೆ ಸಂತಸ ಹಾಗೂ ಮೆಚ್ಚುಗೆಯಾಗುತ್ತದೆ. ವಿಧಿಸಿದ ನಿಯಮವನ್ನು ಪಾಲಿಸದಿದ್ದಲ್ಲಿ, ಬಲತ್ಕಾರವಾಗಿ ಹೊರಹಾಕುವ ವ್ಯವಸ್ಥೆ ಜಾರಿಯಲ್ಲಿದೆಯೆಂಬ ಅಂಶವೂ ತಿಳಿದಿದೆ.

ಪಾರಮಾರ್ಥಿಕ ಜೀವಿಯಾದ ಡಿ.ವಿ.ಜಿ.ಯವರು ನಮ್ಮ ಬದುಕನ್ನು ಯಾತ್ರೆಗೆ ಹೋಲಿಸಿ, ಈ ಜೀವನದ ಅವಧಿಯಲ್ಲಿ ನೇಮ ಧರ್ಮಾಚರಣೆ, ಭಗವಂತ್ಸಜ್ಞೆಗಳಿಂದೊಡಗೂಡಿ ಬದುಕ ಸಾಗಿಸಿ, ಕಾಲನ ಕರೆ ಬಂದಾಗ ನಗುನಗುತ್ತಾ, ಜಗದ ತ್ಯಾಗ ಮಾಡಿರೆಂಬುದೇ ಹೊರತು ಅಳುತ್ತಾ, ದುಃಖಿಸುತ್ತಾ ಅರ್ಜಿಸಿದ ಹಣವನ್ನು ಹಾಗೂ ಪಡೆದ ಬಂಧುಗಳನ್ನು ತೊರೆಯಲಳಬೇಡಿರೆಂಬುದಾಗಿದೆ. ತತ್ಕಾರಣ ಸರ್ವರ ಪ್ರಿಯಕ್ಷೇತ್ರದ ಸಹಕಾರವನ್ನು ಬದುಕಿನಲ್ಲಿ ಅಳವಡಿಸಿಕೊಂಡು ಅರ್ಹರಿಗೆ ಸ್ವಲ್ಪವಾದರೂ ನನಗೇನು ಬಂತು, ನನಗೇನು ಸಿಕ್ಕಿತು, ದಕ್ಕಿತು ಎನ್ನುವುದನ್ನು ಬಿಟ್ಟು ಲೋಕಕಲ್ಯಾಣಾರ್ಥ ದೀನದುರ್ಬಲರಿಗೆ ನೆರವನ್ನು ನೀಡಿರೆಂಬುದೇ ಈ ಪದ್ಯದ ಸಾರಾಂಶವಾಗಿದೆ.

# ಸಹಕಾರಿ ಸಂಘಟನೆಗಳಲ್ಲಿ ಪರಿಣಾಮಕಾರಿ ನಾಯಕತ್ವ

▶▶ ಯಶವಂತ ಡೋಂಗ್ರೆ

"ಸಹಕಾರಿ ಸಂಸ್ಥೆಗಳ ಯಶಸ್ಸಿಗೆ ಅಗತ್ಯವಿರುವುದು ಒಬ್ಬ ದೊಡ್ಡ ನಾಯಕನಲ್ಲ, ಹಲವು ಸಣ್ಣ ನಾಯಕರು" – ವರ್ಗೀಸ್ ಕುರಿಯನ್

ಸಹಕಾರಿ ನಾಯಕತ್ವ (ಕೋ ಆಪರೇಟಿವ್ ಲೀಡರ್ ಶಿಪ್) ಎನ್ನುವುದು ಸಾಮಾನ್ಯ ಅರ್ಥದಲ್ಲಿ ಉಪಯೋಗಿಸುವ ನಾಯಕತ್ವ (ಲೀಡರ್‌ಶಿಪ್) ಅಥವಾ ನಾಯಕ (ಲೀಡರ್) ಶಬ್ದಗಳ ವ್ಯಾಪ್ತಿಗಿಂತ ಭಿನ್ನವೂ, ವಿಸ್ತಾರವೂ ಆದ ಸಂರಚನೆಯಾಗಿದೆ. ಈ ಭಿನ್ನತೆಯೂ ಸಹಕಾರಿ ಸಂಸ್ಥೆಗಳ ವಿಶಿಷ್ಟ ಅನನ್ಯತೆ (ಯುನಿಕ್ ಐಡೆಂಟಿಟಿ)ಯ ಕಾರಣದಿಂದಾಗಿ ಸೃಷ್ಠಿಯಾಗುತ್ತದೆ. ಆದುದರಿಂದ ಸಹಕಾರ ಕ್ಷೇತ್ರದಲ್ಲಿನ ಪರಿಣಾಮಕಾರಿ ನಾಯಕತ್ವದ ಬಗ್ಗೆ ಅರಿವು ಮೂಡಬೇಕಾದರೆ ಸಹಕಾರಿ ಸಂಸ್ಥೆಗಳ ಅನನ್ಯತೆ ಮೊದಲು ಅರಿವಾಗಬೇಕಾಗುತ್ತದೆ. ಆದುದರಿಂದ ಈ ಅನನ್ಯತೆಯ ಅಂಶಗಳಿಂದ ನಮ್ಮ ಚಿಂತನೆಯನ್ನು ಆರಂಭಿಸೋಣ.

**ಸಹಕಾರಿ ಸಂಸ್ಥೆಗಳ ಅನನ್ಯತೆ :** ಸಹಕಾರಿ ಸಂಘಟನೆಗಳು ಕೇವಲ ತಾಂತ್ರಿಕವಾಗಿ ರಚಿಸಲ್ಪಟ್ಟು, ಸಹಕಾರಿ ಕಾಯಿದೆಯಡಿಯಲ್ಲಿ ನೋಂದಾಯಿಸಲ್ಪಡುವುದರಿಂದ ತಮ್ಮ ವಿಶಿಷ್ಟತೆಯನ್ನು ಪಡೆಯುವುದಿಲ್ಲ. ಬದಲಿಗೆ, ನಿರ್ದಿಷ್ಟ ಗುಣಲಕ್ಷಣಗಳನ್ನು ಹೊಂದಿದ್ದಲ್ಲಿ ಮಾತ್ರವೇ ನಿಜವಾದ ಸಹಕಾರಿ ಸಂಸ್ಥೆಗಳಾಗುತ್ತದೆ. ಇಂತಹ ಗುಣಲಕ್ಷಣಗಳನ್ನು ಮೊದಲಾಗಿ ಗಮನಿಸೋಣ.

(ಅ) ಸಹಕಾರಿ ಸಂಸ್ಥೆಗಳು ಸದಸ್ಯ ಕೇಂದ್ರಿತ (ಮೆಂಬರ್ ಸೆಂಟರ್ಡ್) ಮತ್ತು ಸದಸ್ಯ ನಿರ್ದೇಶಿತ (ಮೆಂಬರ್ ಡೈರೆಕ್ಟೆಡ್) ಸಂಸ್ಥೆಗಳು ಎಲ್ಲ ಸಂದರ್ಭದಲ್ಲೂ ಸದಸ್ಯರ ಒಳಿತಿಗಾಗಿ ಕಾರ್ಯ ನಡೆಸುವುದು ಸಹಕಾರಿ ಸಂಸ್ಥೆಗಳ ಕರ್ತವ್ಯ. ಸದಸ್ಯರು ಸಕ್ರಿಯವಾಗಿರದ ಸಂಸ್ಥೆಗಳನ್ನು ಸಹಕಾರಿ ಸಂಸ್ಥೆಗಳೆಂದು ಗುರುತಿಸಲಾಗದು. ಕೆಲವೇ ಸದಸ್ಯರು ಅಥವಾ ನಾಯಕರು ದೀರ್ಘಕಾಲ ಸಂಸ್ಥೆಯನ್ನು ಮುನ್ನಡೆಸುತ್ತಿದ್ದು, ಸಂಸ್ಥೆಯ ಮೇಲೆ ನಿಯಂತ್ರಣ ಹೊಂದಿದ್ದರೆ ಆ ಸಂಸ್ಥೆ ತನ್ನ ಸಹಕಾರಿ ಅನನ್ಯತೆಯನ್ನು ಕಳೆದುಕೊಳ್ಳುತ್ತದೆ.

(ಆ) ಸಹಕಾರಿ ಸಂಸ್ಥೆಗಳ ಸದಸ್ಯರ ಅಗತ್ಯಗಳನ್ನು (ಮೆಂಬರ್ ನೀಡ್ಸ್) ಸಂಸ್ಥೆಯ ವ್ಯವಹಾರವನ್ನಾಗಿ ಪರಿವರ್ತಿಸುವ ಸಂಸ್ಥೆಗಳೇ ಹೊರತು ಮಾರುಕಟ್ಟೆಯ ಬೇಡಿಕೆಯನ್ನು (ಮಾರ್ಕೆಟ್ ಡಿಮ್ಯಾಂಡ್) ಆಧರಿಸಿ ವ್ಯವಹಾರ ಸಂಘಟಿಸುವ ಸಂಸ್ಥೆಗಳಲ್ಲ. ಮಾರುಕಟ್ಟೆಯ ಬೇಡಿಕೆಯ ಆಧಾರದಲ್ಲಿ ವ್ಯವಹಾರಕ್ಕೆ ತೊಡಗಿದಂತೆಲ್ಲ, ಸದಸ್ಯರ ಅಗತ್ಯಗಳಿಂದ ದೂರವಾಗುವ ಸಾಧ್ಯತೆ ಇರುತ್ತದೆ ಮತ್ತು ಸದಸ್ಯರಲ್ಲದವರ ಬೇಡಿಕೆಗಳ ಪೂರೈಕೆಯೆಡೆಗೆ ಗಮನಹರಿಸಬೇಕಾಗುತ್ತದೆ. ಈ ರೀತಿಯ ವ್ಯವಹಾರದಿಂದಾಗಿ ಸಂಸ್ಥೆಯ ಲಾಭ ಹೆಚ್ಚಾಗಬಹುದು. ಆದರೆ, ಸಹಕಾರಿಯ ಅನನ್ಯತೆ ಕಳೆದು ಹೋಗುತ್ತಾ ಖಾಸಗಿ ವ್ಯವಹಾರ ಸಂಸ್ಥೆಯ ಗುಣಲಕ್ಷಣಗಳು ಆವರಿಸುತ್ತವೆ.

(ಇ) ಸಹಕಾರಿ ಸಂಸ್ಥೆಗಳು, ಸಂಸ್ಥೆಯ ಸೇವೆಗಳನ್ನು ಹೆಚ್ಚು ಹೆಚ್ಚು ಉಪಯೋಗಿಸುವ ಸದಸ್ಯರಿಗೆ ಹೆಚ್ಚಿನ ಲಾಭ ದೊರೆಯುವಂತೆ ನೋಡಿಕೊಳ್ಳಬೇಕಾದ ಸಂಸ್ಥೆಗಳು. ಅಂದರೆ, ಹೂಡಿಕೆ ಮಾಡಿದ ಬಂಡವಾಳದ ಆಧಾರದಲ್ಲಿ ಹೆಚ್ಚಿನ ಲಾಭಾಂಶ ನೀಡುವ ಸಂಸ್ಥೆಗಳಾಗಿರದೇ, ಸಂಸ್ಥೆಯ ಸೇವೆ/ ಸರಕುಗಳನ್ನು ಹೆಚ್ಚಾಗಿ ಪಡೆಯುವ ಸದಸ್ಯರಿಗೆ ಹೆಚ್ಚಿನ ಲಾಭಾಂಶ ನೀಡಬೇಕಾದ ಸಂಸ್ಥೆಗಳು.

(ಈ) ಸಹಕಾರಿ ಸಂಸ್ಥೆಗಳು ಪ್ರಜಾ ಸಮಾಜದ (ಸಿವಿಲ್ ಸೊಸೈಟಿ) ಅಂಗ ಸಂಸ್ಥೆಗಳು. ಒಂದು ನಿರ್ದಿಷ್ಟ ಜನಸಮೂಹವು ತನ್ನ ಅಗತ್ಯಗಳಿಗಾಗಿ ತಾನೇ ರಚಿಸಿಕೊಂಡ ಆಂತರಿಕ ಒಳನೋಟದ (ಇನ್‌ವರ್ಡ್ ಲುಕಿಂಗ್) ಸಂಸ್ಥೆಗಳು. ಆದುದರಿಂದ ಪ್ರಜಾಸತ್ತಾತ್ಮಕ ನೆಲೆಯಲ್ಲಿ, ಸದಸ್ಯರ ಸಕ್ರಿಯ ಭಾಗವಹಿಸುವಿಕೆಯ ಆಧಾರದಲ್ಲಿ ಉತ್ತಮ ಸಾಂಸ್ಥಿಕಧರ್ಮ ಪಾಲನೆ ಮಾಡಬೇಕಾದ (ಗುಡ್ ಗವರ್ನೆನ್ಸ್) ಸಂಸ್ಥೆಗಳು. ಆದುದರಿಂದ ನಿರ್ಧಾರಗಳಲ್ಲಿ ಪಾರದರ್ಶಕತೆ (ಟ್ರಾನ್ಸ್‌ಪರೆನ್ಸಿ), ಪರಿಣಾಮಗಳಿಗೆ ಉತ್ತರದಾಯಿತ್ವ (ಅಕೌಂಟೆಬಿಲಿಟಿ), ಎಲ್ಲರ ಭಾಗವಹಿಸುವಿಕೆಗೆ ಅವಕಾಶ (ಪಾರ್ಟಿಸಿಪೇಶನ್) ಮತ್ತು ಕಾನೂನಿನ ಪರಿವಿಧಿಗಳಿಗೆ ಬದ್ಧತೆ (ರೂಲ್ ಆಫ್ ಲಾ) ಇವುಗಳು ಯಾವುದೇ ಸಹಕಾರಿ ಸಂಸ್ಥೆಯಲ್ಲಿ ಇರಲೇಬೇಕಾದ ಗುಣಗಳು.

(ಉ) ವ್ಯವಹಾರ ಕ್ಷೇತ್ರದಲ್ಲಿ ಸಹಕಾರಿ ಸಂಸ್ಥೆಗಳು ನಿರ್ವಹಿಸಬೇಕಾದ ಪ್ರಾಥಮಿಕ ಪಾತ್ರ, ರಚನಾತ್ಮಕ ಸ್ಪರ್ಧಿಗಳ ರೂಪದಲ್ಲಿರಬೇಕು (ಕನ್ಸ್‌ಟ್ರಕ್ಟಿವ್ ಕಾಂಪಿಟೇಟರ್), ಅಂದರೆ, ಸಹಕಾರಿ ಸಂಸ್ಥೆಗಳು ಯಾವುದೇ ಕ್ಷೇತ್ರದಲ್ಲಿ ಏಕಸ್ವಾಮ್ಯವನ್ನು, ಮಾರುಕಟ್ಟೆ ಪೂರ್ಣ ನಿಯಂತ್ರಣವನ್ನು ಹೊಂದಿರಬೇಕಾದ ಸಂಸ್ಥೆಗಳಲ್ಲ. ಬದಲಿಗೆ, ತಮ್ಮ ಅಸ್ತಿತ್ವದಿಂದಾಗಿ ಖಾಸಗಿ ಮತ್ತು ಸಹಕಾರಿ ವ್ಯವಹಾರ ಸಂಘಟನೆಗಳ ಕಾರ್ಯಾನುಷ್ಠಾನದ ಮೇಲೆ ನಿರಂತರ ಪ್ರಭಾವ ಬೀರಬೇಕಾದ ಸಂಸ್ಥೆಗಳು. ಉತ್ತಮ ಮತ್ತು ಪರಿಣಾಮಕಾರಿ ನಾಯಕತ್ವವು ಸಹಕಾರಿ ಸಂಸ್ಥೆಗಳ ಈ ಅನನ್ಯತೆಯನ್ನು ಅರಿತು ನಡೆಯುವ ನಾಯಕತ್ವವಾಗಿರಬೇಕು.

(ಮುಂದಿನ ಸಂಚಿಕೆಗೆ...)

# ಕೃಷಿಕರ ಭರವಸೆಯ ಆಶಾಕಿರಣ : ಕ್ಯಾಂಪ್ಕೋ

▶▶ ರೇಷ್ಮಾ ಚಂದ್ರಹಾಸ, ಡೆಪ್ಯುಟಿ ಮ್ಯಾನೇಜರ್, ಕ್ಯಾಂಪ್ಕೋ, ಮಂಗಳೂರು.

**ಸಹಕಾರ ಕ್ಷೇತ್ರಕ್ಕೆ ಅಭಿವೃದ್ಧಿಯ ಹೊಸ ಮಾದರಿಯನ್ನು ಕೊಟ್ಟ ನಮ್ಮ ರಾಜ್ಯದ ಪ್ರತಿಷ್ಠಿತ ಸಹಕಾರ ಸಂಸ್ಥೆ "ಕ್ಯಾಂಪ್ಕೋ" ಇದರ ಬಗ್ಗೆ ಯಶೋಗಾಥೆ ಮಾಲಿಕೆಯಲ್ಲಿ ಲೇಖನ ಪ್ರಕಟಿಸುವ ಸಂಯುಕ್ತ ಸಹಕಾರಿಯ ಆಶಯಕ್ಕೆ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ ಇವರು ಸ್ಪಂದಿಸಿ ಈ ಲೇಖನ ಪ್ರಕಟಿಸಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಸಹಕಾರ ಕ್ಷೇತ್ರದೆಡೆಗಿನ ಅವರ ಅಪಾರ ಕಳಕಳಿ ಹಾಗೂ ಬದ್ಧತೆಗೆ ಅಭಿನಂದಿಸುತ್ತಾ ಅವರ ಸಹಕಾರವನ್ನು ನೆನೆಯುತ್ತೇವೆ.**

ಕ್ಯಾಂಪ್ಕೋ ಕೃಷಿಕರಿಂದ ಕೃಷಿಕರಿಗಾಗಿ ನಡೆಸಲ್ಪಡುತ್ತಿರುವ ಹೆಮ್ಮೆಯ ಸಹಕಾರಿ ಸಂಸ್ಥೆಯಾಗಿದೆ. 1970ರ ದಶಕದಲ್ಲಿ ಮಾರುಕಟ್ಟೆಯಲ್ಲಿ ಅಡಕೆಯ ಬೆಲೆ ಕುಸಿತದಿಂದ ಕೃಷಿಕರು ಅನುಭವಿಸಿದ ಸಂಕಷ್ಟ ಮತ್ತು ಕರಾಳ ಅನುಭವವೇ ಇಂತಹ ಸಂಸ್ಥೆಯೊಂದರ ಹುಟ್ಟಿಗೆ ಕಾರಣವಾಯಿತು ಎಂಬುದನ್ನು ಮರೆಯುವ ಹಾಗಿಲ್ಲ. 1973 ಜುಲೈ 11ರಂದು ಕರ್ನಾಟಕ ಮತ್ತು ಕೇರಳ ಸರಕಾರಗಳ ಸಹಭಾಗಿತ್ವದೊಂದಿಗೆ ಆರಂಭವಾದ ಈ ಸಂಸ್ಥೆಯು ಇಂದು ಅಡಕೆ ಬೆಳೆಗಾರರ ನಂಬಿಕೆಗೆ ಪಾತ್ರವಾಗಿ ಅವರ ರಕ್ಷಕರಂತೆ ಕಾರ್ಯನಿರ್ವಹಿಸುತ್ತಿದೆ. ಕೃಷಿಕರ ಅಭಿಲಾಷೆಗಳ ಸಾಕ್ಷಾತ್ಕಾರಕ್ಕಾಗಿ ಸ್ಪಷ್ಟವಾದ ಉದ್ದೇಶ ಲಕ್ಷ್ಯಗಳನ್ನು ಮುಂದಿರಿಸಿಕೊಂಡು ಪರಸ್ಪರ ಕೈಜೋಡಿಸಿ ಪ್ರಾಮಾಣಿಕವಾಗಿ ದುಡಿದುದರ ಪರಿಣಾಮವಾಗಿ ಕ್ಯಾಂಪ್ಕೋ ವರ್ಷದಿಂದ ವರ್ಷಕ್ಕೆ ಸಾಧನೆಯ ಶಿಖರವನ್ನು ಏರುತ್ತಿದೆ.

ಅಡಕೆ ಬೆಳೆಗಾರರ ಕೃಷಿ ಉತ್ಪನ್ನಗಳಾದ ಅಡಕೆ, ಕೊಕ್ಕೊ, ಕಾಳುಮೆಣಸು, ರಬ್ಬರ್, ಇತ್ಯಾದಿಗಳ ಖರೀದಿ ಮತ್ತು ಸಂಸ್ಕರಣೆ ಕ್ಯಾಂಪ್ಕೋದ ಪ್ರಧಾನ ಗುರಿ. ಇವುಗಳ ಜೊತೆಗೆ ಅಡಕೆ, ಕೊಕ್ಕೊ ಉತ್ಪನ್ನಗಳ ಸಂಶೋಧನೆಗೆ ಕೂಡಾ ಕ್ಯಾಂಪ್ಕೋ ಮಹತ್ತರ ಪ್ರೋತ್ಸಾಹವನ್ನು ನೀಡುತ್ತಿದೆ. ಕ್ಯಾಂಪ್ಕೋದ ಕಾರ್ಯಕ್ಷೇತ್ರ ಕೇರಳ ಮತ್ತು ಕರ್ನಾಟಕಕ್ಕೆ ಸೀಮಿತವಾಗಿದ್ದರೂ ಇಂದು ಭಾರತದಾದ್ಯಂತ ನೂರಾರು ಶಾಖೆಗಳನ್ನು ಹೊಂದಿದ್ದು, ಒಂದು ಲಕ್ಷದ ಏಳು ಸದಸ್ಯರನ್ನು ಒಳಗೊಂಡ ಮಹಾ ವಟ ವೃಕ್ಷವಾಗಿ ಬೆಳೆದಿರುವುದು ನಮಗೆಲ್ಲರಿಗೂ ಅಭಿಮಾನದ ವಿಷಯವಾಗಿದೆ.

### ಸಂಘಟನೆ ಮತ್ತು ಕಾರ್ಯನಿರ್ವಹಣೆ :

ಸಂಸ್ಥೆಯ ಕಾರ್ಯನಿರ್ವಹಣೆಯ ಸಂಪೂರ್ಣ ನಿಯಂತ್ರಣವು ನಿರ್ದೇಶಕ ಮಂಡಳಿಯ ಕೈಯಲ್ಲಿದೆ. ಸಂಸ್ಥೆ ನಿಯಮಾವಳಿಗನುಸಾರವಾಗಿ ವ್ಯವಸ್ಥಾಪಕ ನಿರ್ದೇಶಕರು ಸೇರಿದಂತೆ




18 ಮಂದಿಯನ್ನೊಳಗೊಂಡ ನಿರ್ದೇಶಕ ಮಂಡಳಿಯನ್ನು ಆಯ್ಕೆ ಮಾಡಲಾಗುತ್ತದೆ. ಸಹಕಾರ ಕ್ಷೇತ್ರ ಮತ್ತು ಕೃಷಿ ಕ್ಷೇತ್ರದ ಅಪಾರ ಅನುಭವವಿರುವ ಬಹುಮುಖ ಪ್ರತಿಭೆ ಮತ್ತು ದೂರದೃಷ್ಟಿಯನ್ನು ಹೊಂದಿದ ಸನ್ಮಾನ್ಯ ಎಸ್.ಆರ್. ಸತೀಶ್ಚಂದ್ರ ಅವರು ಕ್ಯಾಂಪ್ಕೋದ ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಇವರ ನಾಯಕತ್ವದಲ್ಲಿ ಸಂಸ್ಥೆಯು ದಿನದಿಂದ ದಿನಕ್ಕೆ ಯಶಸ್ಸಿನ ಮೆಟ್ಟಿಲನ್ನೇರುತ್ತಿದೆ. ಅರ್ಪಣ ಮನೋಭಾವ ಮತ್ತು ನಾಯಕತ್ವ ಗುಣವಿರುವ ಔದ್ಯೋಗಿಕ ವೃಂದದ ಕಾರ್ಯದಕ್ಷತೆಯ ವಿಕಾಸಕ್ಕೆ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವುದು, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ಅನುಗುಣವಾಗಿ ಸಂಸ್ಥೆಯನ್ನು ಹೈಟೆಕ್‌ಗೊಳಿಸುವುದು, ಮೇಕ್ ಇನ್ ಇಂಡಿಯಾ ಮತ್ತು ಸ್ವದೇಶಿ ಆಶಯಕ್ಕೆ ಹೊಂದಿಕೊಂಡು ಚಾಕಲೇಟ್ ಫ್ಯಾಕ್ಟರಿಯನ್ನು ಜಾಗತಿಕ ಮಟ್ಟಕ್ಕೇರಿಸುವುದು, (Digital - CAMPCO & Make-In-India Pure Swadeshi Chocolates) ಹೀಗೆ ಹತ್ತು ಹಲವು ಉನ್ನತ ಆಶಯಗಳೊಂದಿಗೆ ಅವರು ಈ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ.

ಕಾರ್ಯದಕ್ಷತೆ, ಪ್ರಾಮಾಣಿಕತೆ ಮತ್ತು ನೂತನ ಆಶಯಗಳನ್ನೊಂದಿರುವ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ

ಯಂ. ಸುರೇಶ್ ಭಂಡಾರಿಯವರ ಕಾರ್ಯವೈಖರಿಯು ನಮಗೆಲ್ಲ ಸ್ಫೂರ್ತಿದಾಯಕವಾಗಿದೆ. ಗತವರ್ಷಗಳಲ್ಲಿ ಕ್ಯಾಂಪ್ಕೋ ಸಂಸ್ಥೆಯನ್ನು ಅಭಿವೃದ್ಧಿಯ ಕಡೆಗೆ ಕೊಂಡೊಯ್ಯುವಲ್ಲಿ ಅವರ ಅರ್ಪಣಾ ಮನೋಭಾವ ಮತ್ತು ದೂರದೃಷ್ಟಿಯ ದುಡಿಮೆಯು ಕಾರಣವಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹೀಗೆ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕ ಮಂಡಳಿ, ಔದ್ಯೋಗಿಕ ವೃಂದ ಇವರೆಲ್ಲರ ಸಂಘಟಿತ ಪ್ರಯತ್ನದ ಫಲವಾಗಿ ಕ್ಯಾಂಪ್ಕೋ ನಡೆದು ಬಂದ 45 ವರ್ಷಗಳ ಹಾದಿಯಲ್ಲಿ ಐತಿಹಾಸಿಕ ದಾಖಲೆಯನ್ನು ನಿರ್ಮಿಸಲು ಸಾಧ್ಯವಾಗಿರುವುದು ನಮಗೆಲ್ಲರಿಗೂ ಸಂತಸದ ವಿಷಯ.

ಕ್ಯಾಂಪ್ಕೋ ಐತಿಹಾಸಿಕ ದಾಖಲೆಯನ್ನು ನಿರ್ಮಿಸಿರುವ ಈ ಸುಸಂದರ್ಭದಲ್ಲಿ ಈ ಸಂಸ್ಥೆಯ ಸ್ಥಾಪನೆಗೆ ಕಾರಣೀಭೂತರಾದ ಮತ್ತು ಸಂಸ್ಥೆಯನ್ನು ಅಭಿವೃದ್ಧಿಯ ಹಾದಿಗೆ ಕೊಂಡೊಯ್ದ ಘನ ವ್ಯಕ್ತಿತ್ವಗಳನ್ನು ಇಲ್ಲಿ ಸ್ಮರಿಸಿಕೊಳ್ಳಲೇಬೇಕು. ಸಹಕಾರ ಕ್ಷೇತ್ರದ ಹರಿಕಾರರಾದ ಶ್ರೀಯುತ ವಾರಾಣಾಸಿ ಸುಬ್ರಾಯ ಭಟ್ ಅವರ ನೇತೃತ್ವದಲ್ಲಿ ಹುಟ್ಟಿಕೊಂಡ ಈ ಸಂಸ್ಥೆಯು ಶ್ರೀ ಜಿ.ಕೆ. ಸಂಗಮೇಶ್ವರ, ಶ್ರೀ ಎ.ಎ. ದೇಸಾಯಿ ಅವರ ವ್ಯವಸ್ಥಾಪಕ ನಿರ್ದೇಶಕತ್ವದಲ್ಲಿ ಮುಂದೆ ಸಾಗಿತು. ಆ ಬಳಿಕ ಕ್ಯಾಂಪ್ಕೋದ ಸಾರಥ್ಯವನ್ನು ವಹಿಸಿದವರು ಶ್ರೀ ಬಿ.ಆರ್.ಕಾಮತ್ ಮತ್ತು ಶ್ರೀ ಕಡವೆ ಹೆಗ್ಡೆ ಶಿರ್ಸಿ ಇವರ ಕೊಡುಗೆ ಅವಿಸ್ಮರಣೀಯವಾದುದು. ಆರಂಭದ ದಿನಗಳಲ್ಲಿ ಕರ್ನಾಟಕ ಮತ್ತು ಕೇರಳ ಸರಕಾರಗಳ ನಿರ್ದೇಶಕ ಪ್ರತಿನಿಧಿಗಳಿದ್ದ ಆಡಳಿತ ಮಂಡಳಿಯು ಅಸ್ತಿತ್ವದಲ್ಲಿತ್ತು. ಶ್ರೀ ಎಲ್. ಯನ್. ಕುಡೂರು ಅವರ ಅಧಿಕಾರಾವಧಿಯಲ್ಲಿ ಕರ್ನಾಟಕ ಮತ್ತು ಕೇರಳ ಸರಕಾರಗಳ ಶೇರು ಬಂಡವಾಳವನ್ನು ಹಿಂತಿರುಗಿಸಿದ್ದು ಮಾತ್ರವಲ್ಲ ಸಂಸ್ಥೆಯನ್ನು ಎರಡೂ ಸರಕಾರಗಳ ನಿಯಂತ್ರಣದಿಂದ ಮುಕ್ತಗೊಳಿಸಿ ಸ್ವತಂತ್ರ ಸಂಸ್ಥೆಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ



ಮಾಡಿದುದು ಕ್ಯಾಂಪ್ಕೋದ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿದೆ. ಮುಂದೆ ಸಂಸ್ಥೆಯ ಅಧ್ಯಕ್ಷ ಪದವಿಯನ್ನು ಅಲಂಕರಿಸಿದವರು ಶ್ರೀ ಯಸ್. ಆರ್.ರಂಗಮೂರ್ತಿ. ಇವರ ಪ್ರಯತ್ನದ ಫಲವಾಗಿ ನಷ್ಟದ ಹಾದಿಯಲ್ಲಿದ್ದ ಚಾಕಲೇಟ್ ಫ್ಯಾಕ್ಟರಿಯನ್ನು ಲಾಭದ ಹಾದಿಗೆ ತರಲು ಸಾಧ್ಯವಾಯಿತು ಮಾತ್ರವಲ್ಲ ಮಾರುಕಟ್ಟೆಯಲ್ಲಿ ಕ್ಯಾಂಪ್ಕೋ ಚಾಕಲೇಟು ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುವಂತಾಯಿತು. ಸಹಕಾರಿ ಧುರೀಣರಾದ ಶ್ರೀ ಕೊಂಕೋಡಿ ಪದ್ಮನಾಭ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಂಸ್ಥೆಯ ಪ್ರಗತಿಗೆ ಮತ್ತಷ್ಟು ವೇಗ ಲಭಿಸಿತು. ಅಡಕೆ ಮತ್ತು ಚಾಕಲೇಟು ವ್ಯವಹಾರದಲ್ಲಿ ದಾಖಲೆಯನ್ನು ನಿರ್ಮಿಸಲು ಅವರಿಂದ ಸಾಧ್ಯವಾದುದು ಮಾತ್ರವಲ್ಲ ದೇಶದಾದ್ಯಂತ ಸಂಸ್ಥೆಯ ವಿವಿಧ ಶಾಖೆಗಳಲ್ಲಿ ಕೆಲಸ ಮಾಡುತ್ತಿರುವ ಔದ್ಯೋಗಿಕ ವೃಂದದ ಕಾರ್ಯದಕ್ಷತೆ ಮತ್ತು ಮಾನಸಿಕ ತೃಪ್ತಿಯ ಕಡೆಗೆ ಆದ್ಯತೆಯನ್ನು ನೀಡಿ ಮಾನವ ಸಂಪನ್ಮೂಲದ ವಿಕಾಸಕ್ಕೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡದ್ದು ಶ್ಲಾಘನೀಯ.

### ಅಡಕೆ ಕ್ಷೇತ್ರದಲ್ಲಿ ಕ್ಯಾಂಪ್ಕೋ :

- 1973ರಲ್ಲಿ ಅಡಕೆ ಮಾರುಕಟ್ಟೆಯನ್ನು ಪ್ರವೇಶಿಸಿದ ಈ ಸಂಸ್ಥೆಯು ಕೇವಲ ಐದು ಕೇಂದ್ರಗಳಲ್ಲಿ ಕೃಷಿಕರಿಂದ ಅಡಕೆಯನ್ನು ಖರೀದಿಸುತ್ತಿತ್ತು. ಆದರೆ ಇಂದು ದೇಶದಾದ್ಯಂತ ವ್ಯಾಪಿಸಿರುವ 160 ಶಾಖೆಗಳಲ್ಲಿ ಅಡಕೆ ವ್ಯವಹಾರ ಮತ್ತು ಹನ್ನೆರಡು ಡಿಪೋಗಳಲ್ಲಿ ಸಂಸ್ಕರಣೆ ನಡೆಯುತ್ತಿರುವುದು ಹೆಮ್ಮೆಯ ವಿಚಾರವಾಗಿದೆ.
- ಚಿಕ್ಕ ಚಿಕ್ಕ ಪ್ಯಾಕೇಟುಗಳಲ್ಲಿ ಸುಪಾರಿಯನ್ನು ಗ್ರಾಹಕರಿಗೆ/ಪಾನ್ ವಾಲಾಗಳಿಗೆ ಒದಗಿಸಲು ಸಾಧ್ಯವಾದುದು ಕ್ಯಾಂಪ್ಕೋದ ಇನ್ನೊಂದು ಸಾಧನೆಯಾಗಿದೆ. ಇದು ಸಂಸ್ಥೆಯ ಬಹುದಿನದ ಕನಸಾಗಿತ್ತು. ಆರಂಭದ ದಿನಗಳಲ್ಲಿ 1 ಕೆ.ಜಿ., 5 ಕೆ.ಜಿ., 10 ಕೆ.ಜಿ ಸುಪಾರಿ ಪ್ಯಾಕೇಟುಗಳಲ್ಲಿ ಗುಜರಾತಿನಲ್ಲಿ ನಡೆಯುತ್ತಿದ್ದ ಮಾರಾಟವು ಬಳಿಕ ಉತ್ತರಪ್ರದೇಶಕ್ಕೂ ವ್ಯಾಪಿಸಿತು. ಈ ಸುಪಾರಿಗೆ ದೇಶದಾದ್ಯಂತ ಹೆಚ್ಚಿನ ಬೇಡಿಕೆ ಬರುತ್ತಿರುವುದರಿಂದ ಉಳಿದ ಪ್ರಾಂತ್ಯಗಳಿಗೂ ಇದರ ಮಾರಾಟವನ್ನು ವಿಸ್ತರಿಸಲು ಕ್ಯಾಂಪ್ಕೋ ತೀರ್ಮಾನಿಸಿದೆ.
- ಯಾವುದೇ ಸಂಸ್ಥೆಯು ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿ ನಿರಂತರ ಸಂಶೋಧನೆ ಹಾಗೂ ವಿಶ್ಲೇಷಣೆಯು ನಡೆಯಬೇಕು. ಈ ಆಶಯಕ್ಕೆ ಒತ್ತುಕೊಟ್ಟು ಪ್ರಾರಂಭದ ದಿನಗಳಲ್ಲಿ ಅಡಕೆ ಬೆಲೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದ ಸಂಶೋಧನೆ ಮತ್ತು ವಿಶ್ಲೇಷಣೆಗಳನ್ನು ನಡೆಸುತ್ತಿತ್ತು. 20.05.1998 ರಲ್ಲಿ ಶ್ರೀ




ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಸನ್ಮಾನ್ಯ ಶ್ರೀ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆ ಮತ್ತು ಕ್ಯಾಂಪ್ಕೋದ ಅಧ್ಯಕ್ಷರು ಟ್ರಸ್ಟಿಯಾಗಿರುವ ಸಂಶೋಧನಾ ವಿಭಾಗವು ಅಸ್ತಿತ್ವಕ್ಕೆ ಬಂತು.

- ಕ್ಯಾಂಪ್ಕೋ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು ಮತ್ತು ARDF ನ ಸಹಯೋಗದೊಂದಿಗೆ ಕೃಷಿ ಕ್ಷೇತ್ರದಲ್ಲಿ ಯಂತ್ರಗಳ ಬಳಕೆ, ನೂತನ ತಂತ್ರಜ್ಞಾನದ ಅಳವಡಿಕೆಗೆ ಸಂಬಂಧಿಸಿದಂತೆ ಕೃಷಿಕರಿಗೆ ಮಾಹಿತಿ ನೀಡಲು 2009, 2012, 2015ರಲ್ಲಿ ಕೃಷಿ ಯಂತ್ರಮೇಳವನ್ನು ಹಮ್ಮಿಕೊಂಡಿತು. ನೂತನ ಯಂತ್ರಗಳ ಪ್ರಾತ್ಯಕ್ಷಿಕೆ ಮತ್ತು ಮಾರಾಟದ ವ್ಯವಸ್ಥೆಯು ಈ ಮೇಳದಲ್ಲಿದ್ದುದು ಕೃಷಿಕರಿಗೆ ಹೆಚ್ಚಿನ ಪ್ರಯೋಜನವಾಯಿತು.
- ಅದೇ ರೀತಿಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜು ಮತ್ತು ARDFನ ಸಹಭಾಗಿತ್ವದೊಂದಿಗೆ ಅಡಕೆಯ ಔಷಧೀಯ ಉಪಯೋಗದ ಕುರಿತು ಸಂಶೋಧನೆ ನಡೆದು ಮಧುಮೇಹದ ಶಮನಕ್ಕೆ ಅಗತ್ಯವಾದ ಪೂಗ ಸಿರಪ್ ಮತ್ತು ಪೂಗ ಹುಡಿಯನ್ನು ಔಷಧ ರೂಪದಲ್ಲಿ ಮಾರುಕಟ್ಟೆಗೆ ತರಲಾಯಿತು.
- ಕಡಿಮೆ ಬೆಲೆಗೆ ಹೊರದೇಶಗಳಿಂದ ಗುಟ್ಕಾಕ್ಕೆ ಅಗತ್ಯವಿರುವ ಸುಪಾರಿಯ ಆಮದಾಗುತ್ತಿರುವುದು ಅಡಕೆ ಬೆಳೆಗಾರರಿಗೆ ದೊಡ್ಡ ತಲೆನೋವಾಗಿತ್ತು. ಇದು ಕಳಪೆ ಗುಣಮಟ್ಟದ್ದಾಗಿತ್ತು. ಇದನ್ನು ಕ್ಯಾಂಪ್ಕೋ ಪ್ರಬಲವಾಗಿ ವಿರೋಧಿಸಿದ್ದು ಮಾತ್ರವಲ್ಲ CPCRIಯ ನೇತೃತ್ವದಲ್ಲಿ ಆಮದು ಸುಪಾರಿಯ ಗುಣಮಟ್ಟವನ್ನು ನಿರ್ಧರಿಸಬೇಕೆಂಬ ಬೇಡಿಕೆಯನ್ನು ಮುಂದಿರಿಸಿಕೊಂಡು ಹೋರಾಟ ನಡೆಸಿತು. ತನ್ಮೂಲಕ ಕಳಪೆ ಸುಪಾರಿಯ ಆಮದಿನ ಮೇಲೆ ನಿಯಂತ್ರಣ ತರಲು ಸಾಧ್ಯವಾಯಿತು. ಸಂಸ್ಥೆಯ ಒತ್ತಡದ ಪರಿಣಾಮವಾಗಿ 2017ರಲ್ಲಿ DGFT ಮಧ್ಯಪ್ರವೇಶಿಸಿ ಆಮದಾಗುತ್ತಿದ್ದ ಒಂದು ಕೆ.ಜಿ. ಅಡಕೆ ಬೆಲೆಯನ್ನು 162 ರೂಪಾಯಿಯಿಂದ 251ಕ್ಕೆ ಏರಿಸಿತು. ಇದರ ಪರಿಣಾಮವಾಗಿ ಸ್ವದೇಶಿ ಅಡಕೆ ಕೃಷಿಕರಿಗೆ ಉತ್ತಮ ಬೆಲೆ ಲಭಿಸುವಂತೆ ಮಾಡಲು ಸಾಧ್ಯವಾಯಿತು.




### ಕೋಕ್ಕೋ ಕ್ಷೇತ್ರದಲ್ಲಿ ಕ್ಯಾಂಪ್ಕೋ :

ಅಡಕೆ ವ್ಯವಹಾರದಲ್ಲಿ ಸ್ಥಿರತೆಯನ್ನು ಸಾಧಿಸಿದ ಮೇಲೆ ಕೃಷಿಕರ ಇನ್ನೊಂದು ಬೇಡಿಕೆಗೆ ಪರಿಹಾರವನ್ನು ತರಲು ಕ್ಯಾಂಪ್ಕೋ ಪ್ರಯತ್ನಿಸಿತು. ಅಡಕೆಯೊಂದಿಗೆ ಉಪ ಬೆಳೆಯಾಗಿದ್ದ ಕೋಕ್ಕೋ ಕೃಷಿಕರ ಆದಾಯದ ಮತ್ತೊಂದು ಹಾದಿಯಾಗಿತ್ತು. ಕ್ಯಾಡ್ ಬರಿಸ್ ಸಂಸ್ಥೆಯು ಕೋಕ್ಕೋ ಖರೀದಿಯನ್ನು ನಿಲ್ಲಿಸಿದಾಗ ಕೋಕ್ಕೋ ಬೆಳೆಗಾರರು ಅಪಾರ ನಷ್ಟಕ್ಕೊಳಗಾದರು. ಇದಕ್ಕೆ ಶಾಶ್ವತ ಪರಿಹಾರವಾಗಿ 1986 ರಲ್ಲಿ ಕ್ಯಾಂಪ್ಕೋ ಸ್ವಂತ ನೆಲೆಯಲ್ಲಿ ಚಾಕಲೇಟ್ ಫ್ಯಾಕ್ಟರಿಯನ್ನು ಪುತ್ತೂರಿನಲ್ಲಿ ಆರಂಭಿಸಿತು.

- ಪ್ರತಿಷ್ಠಿತ ಚಾಕಲೇಟು ಕಂಪೆನಿಗಳಿಗೆ ಸವಾಲೊಡ್ಡುವ ರೀತಿಯಲ್ಲಿ ಕ್ಯಾಂಪ್ಕೋ ಭಾರತದಲ್ಲಿ ಮಾತ್ರವಲ್ಲ ದಕ್ಷಿಣ ಏಷ್ಯಾ ಖಂಡದಲ್ಲಿ ಅತಿ ದೊಡ್ಡ ಚಾಕಲೇಟು ಫ್ಯಾಕ್ಟರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸೆಪ್ಟೆಂಬರ್ 1, 1986 ರಂದು ಅಂದಿನ ರಾಷ್ಟ್ರಪತಿಗಳಾದ ಸನ್ಮಾನ್ಯ ಗ್ಯಾನಿ ಜೈಲ್ ಸಿಂಗ್ ಈ ಸಂಸ್ಥೆಯನ್ನು ಲೋಕಾರ್ಪಣೆಗೈದರು. ಉತ್ತಮ ಗುಣಮಟ್ಟ ಮತ್ತು ಸ್ವಯಂಚಾಲಿತ ಯಂತ್ರಗಳನ್ನೊಳಗೊಂಡ ಚಾಕಲೇಟು ಫ್ಯಾಕ್ಟರಿಯು ವಾರ್ಷಿಕವಾಗಿ 22,000 ಮೆಟ್ರಿಕ್ ಟನ್ ಚಾಕಲೇಟನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ.
- ಈ ಫ್ಯಾಕ್ಟರಿಯ ಸ್ಥಾಪನಾ ವೆಚ್ಚ 60.27 ಕೋಟಿ. ಇದರಲ್ಲಿ 54.77 ಕೋಟಿ ಫ್ಯಾಕ್ಟರಿಗೆ ಅಗತ್ಯವಿರುವ ಯಂತ್ರಗಳ ಖರೀದಿಗೆ







ಬಳಕೆಯಾಗಿದೆ. ಇಂದು ರುಚಿ ಮತ್ತು ಗುಣಮಟ್ಟದಲ್ಲಿ ಎಲ್ಲರ ಗಮನ ಸೆಳೆದಿರುವ ಕ್ಯಾಂಪ್ಕೋ ಚಾಕಲೇಟ್ ಗ್ರಾಹಕರ ಆಯ್ಕೆಯ ಬ್ರಾಂಡಾಗಿ ಮಾರುಕಟ್ಟೆಯಲ್ಲಿ ವಿರಾಜಿಸುತ್ತಿದೆ.

- ಮೆಲ್ಟೋ, ಕ್ರೀಂ, ಟರ್ಬೋ, ಮೆಗಾಬೈಟ್, ಎಕ್ಲೇರ್ಸ್, ವಿನ್ನರ್, ಕ್ರಸ್ಟ್, ಡಾರ್ಕ್ ಟಾನ್, ಕ್ರಂಚೋಸ್, ಫನ್ ಟಾನ್ ಡಾರ್ಕ್, ಕ್ರಸ್ಟೋ ಚಾಕಲೇಟ್, ಹೀಗೆ ಗ್ರಾಹಕರ ಆಸಕ್ತಿಗನುಸಾರವಾಗಿ ಕ್ಯಾಂಪ್ಕೋ ಚಾಕಲೇಟು ವಿವಿಧ ಬ್ರಾಂಡುಗಳಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿದೆ.
- ಅದೇರೀತಿ ಉಳಿದ ಖಾದ್ಯ ತಯಾರಿಯಲ್ಲಿ ಬಳಕೆಯಾಗುವ ಉತ್ಪನ್ನಗಳಾದ ಕೊಕ್ಕೋ ಮಾಸ್, ಕೊಕ್ಕೋ ಬಟರ್, ಕೊಕ್ಕೊ ಪೌಡರ್, ಚಾಕಲೇಟ್ ಮಾಸ್ ಮಿಲ್ಕ್, ಡಾರ್ಕ್ ಚಾಕಲೇಟ್, ಮಿಲ್ಕ್/ಡಾರ್ಕ್ ವೈಟ್ ಚಾಕೋಮಾಸ್, ಚಾಕೋಚಿಪ್ಸ್, ಚಾಕೋಪೇಸ್ಟ್, ಮಿಲ್ಕ್ ಚಾಕೋಪೇಸ್ಟ್, ಪ್ರಿಮಿಯಂ ಚಾಕೋಪೇಸ್ಟ್, ಚಾಕೋಡಿಪ್ ಮಿಲ್ಕ್, ಫ್ಲೈನ್ ಇತ್ಯಾದಿಗಳನ್ನು ಕ್ಯಾಂಪ್ಕೋ ತಯಾರಿಸುತ್ತಿದೆ.
- ಕೋಕ್ಕೊ ಬೆಳೆಗಾರರನ್ನು ಪ್ರೋತ್ಸಾಹಿಸಲು, ಕೋಕ್ಕೊದಿಂದ ಉತ್ತಮ ಗುಣಮಟ್ಟದ ಚಾಕಲೇಟಿನ ಉತ್ಪಾದನೆ ಹಾಗೂ ಚಾಕಲೇಟು ವ್ಯವಹಾರದಲ್ಲಿ ಸ್ಥಿರತೆಯನ್ನು ಸಾಧಿಸಲು ಇತ್ತೀಚೆಗೆ 21 ಕೋಟಿ ರೂ. ವೆಚ್ಚದಲ್ಲಿ ಆಧುನಿಕ ರೀತಿಯ ಚಾಕಲೇಟು ಮಿಕ್ಸಿಂಗ್ ಘಟಕವನ್ನು ಪುತ್ತೂರು ಫ್ಯಾಕ್ಟರಿಯಲ್ಲಿ ಸ್ಥಾಪಿಸಲಾಯಿತು. ಇಟಲಿಯ ಪ್ರತಿಷ್ಠಿತ ಕಾರ್ಲ್ ಆ್ಯಂಡ್ ಮೊಂಟನರಿ ಸಂಸ್ಥೆಯು ಈ ಘಟಕವನ್ನು ನಮ್ಮ ಸಂಸ್ಥೆಗೆ ಪೂರೈಸಿದೆ.
- ಲೊಟ್ಟೆ ಇಂಡಿಯಾ ಕಂಪೆನಿಯೊಂದಿಗೆ ಚಾಕಲೇಟಿನ ರಖಂ ವ್ಯಾಪಾರ ನಡೆಯುತ್ತಿದೆ. "ಸಹಕಾರಿ ಸಂಸ್ಥೆಗಳೊಂದಿಗೆ ಸಹಕಾರ' ಎಂಬ ಸಿದ್ಧಾಂತದ ಆಧಾರದಲ್ಲಿ KMF, Milma ಸಂಸ್ಥೆಗಳ ಸಹಯೋಗದೊಂದಿಗೆ ಚಾಕಲೇಟು ಮತ್ತು ಹಾಲಿನ ಉತ್ಪನ್ನಗಳನ್ನು ಕ್ಯಾಂಪ್ಕೋ ಗ್ರಾಹಕರಿಗೆ ಒದಗಿಸುತ್ತಿದೆ. ಇದು ಚಾಕಲೇಟು ಫ್ಯಾಕ್ಟರಿಯ ಮತ್ತೊಂದು ಸಾಧನೆಯಾಗಿದೆ. ಚಾಕಲೇಟು ಮಾರುಕಟ್ಟೆಯಲ್ಲಿ ನಮ್ಮ ಉತ್ಪನ್ನಗಳು ತುಂಬಿದುದು ಮಾತ್ರವಲ್ಲ ಭಾರತೀಯ ಸೇನಾ ವಿಭಾಗಕ್ಕೂ ಕ್ಯಾಂಪ್ಕೋ ಚಾಕಲೇಟುಗಳನ್ನು ವಿತರಣೆ ಮಾಡುತ್ತಿರುವುದು ಸಂತಸದ ವಿಚಾರವಾಗಿದೆ.
- ಆಫ್ರಿಕಾದ ರಾಜ್ಯಗಳಿಗೆ ಪ್ರತಿ ತಿಂಗಳೂ 14 ಕಂಟೈನರ್ ಚಾಕಲೇಟು ಪಾನೀಯವನ್ನು ಕ್ಯಾಂಪ್ಕೋ ರಫ್ತು ಮಾಡುತ್ತಿದೆ. ನೆಸ್ಲೆ ಮತ್ತು ಕ್ಯಾಡ್ ಬರಿಸ್ ಕಂಪೆನಿಗಳ ಬೇಡಿಕೆಯ ಮೇರೆಗೆ ಅವರ ಉತ್ಪನ್ನಗಳನ್ನು ನಮ್ಮ ಸಂಸ್ಥೆಯ ಮುಖಾಂತರ ಉತ್ಪಾದಿಸುತ್ತಿದೆ. ಜೊತೆಗೆ ಅವರಿಗೆ ಅಗತ್ಯವಿರುವ ಕೊಕ್ಕೊ ಬಟರ್ ಮತ್ತು ಹುಡಿಯನ್ನು ಪೂರೈಕೆ ಮಾಡುತ್ತಿದೆ.
- ಕ್ಯಾಂಪ್ಕೋದ ಚಾಕಲೇಟು ಉತ್ಪನ್ನಗಳ ಮತ್ತು ಕೊಕ್ಕೋ ಕೈಗಾರಿಕೋತ್ಪನ್ನಗಳು ಸುಲಭವಾಗಿ ಮತ್ತು ಕಡಿಮೆ ಬೆಲೆಯಲ್ಲಿ ಗ್ರಾಹಕರಿಗೆ ಲಭ್ಯವಾಗುವಂತೆ ಮಾಡಲು ಪುತ್ತೂರಿನಲ್ಲಿ "ಕ್ಯಾಂಪ್ಕೋ ಚಾಕಲೇಟು ಕಿಯೋಸ್ಕ್' ಎಂಬ ವ್ಯಾಪಾರ ಮಳಿಗೆಯನ್ನು ಆರಂಭಿಸಿದೆ.
- ಕ್ಯಾಂಪ್ಕೋ ಚಾಕಲೇಟು ಉತ್ಪನ್ನಗಳು ರುಚಿ ಮತ್ತು ಉತ್ಕೃಷ್ಟ ಗುಣಮಟ್ಟವನ್ನು ಹೊಂದಿರುವುದು ಮಾತ್ರವಲ್ಲ ISO 22000, ISO 14000, OHSAS 18000 ಸರ್ಟಿಫಿಕೇಟುಗಳನ್ನು ಪಡೆದುಕೊಂಡಿದೆ. ಕೇಂದ್ರ ವಾಣಿಜ್ಯ ಸಚಿವಾಲಯದ ಆಶ್ರಯದಲ್ಲಿರುವ ಭಾರತೀಯ ರಫ್ತು ಸಂಸ್ಥೆಗಳ ಫೆಡರೇಶನ್ (FIEO) ಪ್ರತಿವರ್ಷ ನೀಡುತ್ತಿರುವ ವಲಯ ಶ್ರೇಷ್ಠ ರಫ್ತು

**ಅಡಕೆ ವ್ಯವಹಾರದಲ್ಲಿ ಸ್ಥಿರತೆಯನ್ನು ಸಾಧಿಸಿದ ಮೇಲೆ ಕೃಷಿಕರ ಇನ್ನೊಂದು ಬೇಡಿಕೆಗೆ ಪರಿಹಾರವನ್ನು ತರಲು ಕ್ಯಾಂಪ್ಕೋ ಪ್ರಯತ್ನಿಸಿತು. ಅಡಕೆಯೊಂದಿಗೆ ಉಪ ಬೆಳೆಯಾಗಿದ್ದ ಕೋಕೋ ಕೃಷಿಕರ ಆದಾಯದ ಮತ್ತೊಂದು ಹಾದಿಯಾಗಿತ್ತು. ಕ್ಯಾಡ್ ಬರಿಸ್ ಸಂಸ್ಥೆಯು ಕೋಕೋ ಖರೀದಿಯನ್ನು ನಿಲ್ಲಿಸಿದಾಗ ಕೋಕೋ ಬೆಳೆಗಾರರು ಅಪಾರ ನಷ್ಟಕ್ಕೊಳಗಾದರು. ಇದಕ್ಕೆ ಶಾಶ್ವತ ಪರಿಹಾರವಾಗಿ 1986 ರಲ್ಲಿ ಕ್ಯಾಂಪ್ಕೋ ಸ್ವಂತ ನೆಲೆಯಲ್ಲಿ ಚಾಕಲೇಟ್ ಫ್ಯಾಕ್ಟರಿಯನ್ನು ಪುತ್ತೂರಿನಲ್ಲಿ ಆರಂಭಿಸಿತು.**

ಪ್ರಶಸ್ತಿಯನ್ನು ಕಳೆದ ಸಾಲಿನಲ್ಲಿ ಕ್ಯಾಂಪ್ಕೋ ಪಡೆದುಕೊಂಡಿದೆ. ಕ್ಯಾಂಪ್ಕೋ ಸತತವಾಗಿ ನಾಲ್ಕನೇ ಬಾರಿ ಈ ಪ್ರಶಸ್ತಿಯನ್ನು ಪಡೆಯುತ್ತಿರುವುದು ಹೆಮ್ಮೆಯ ವಿಚಾರವಾಗಿದೆ.

- ಫ್ಯಾಕ್ಟರಿಯಲ್ಲಿ ಅಧಿಕ ಪ್ರಮಾಣದಲ್ಲಿ ತೈಲ ಇಂಧನದ ಬಳಕೆಯಾಗುತ್ತಿರುವುದು ಪ್ರಕೃತಿಯ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡಬಹುದು. ಪರಿಸರ ಸೌಹಾರ್ದ ಆಶಯವನ್ನು ಮುಂದಿಟ್ಟುಕೊಂಡು ಗಾಳಿಯಂತ್ರದ ಸಹಾಯದಿಂದ ಫ್ಯಾಕ್ಟರಿಗೆ ಅಗತ್ಯವಿರುವ ವಿದ್ಯುತ್ತನ್ನು ಉತ್ಪಾದಿಸಲು ಕ್ಯಾಂಪ್ಕೋ ಪ್ರಯತ್ನಿಸಿದೆ. ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿ 1.2 ಮೆಗಾವಾಟ್ ಮತ್ತು ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ 0.85 ಮೆಗಾವಾಟ್ ಸಾಮರ್ಥ್ಯದ ಎರಡು ಘಟಕಗಳನ್ನು ಸ್ಥಾಪಿಸುವುದರ ಮೂಲಕ ಫ್ಯಾಕ್ಟರಿಗೆ ಅಗತ್ಯವಿರುವ ಶೇಕಡಾ 80ರಷ್ಟು ವಿದ್ಯುತ್ತನ್ನು ಪ್ರಕೃತಿಯಿಂದ ಉತ್ಪಾದಿಸಿದೆ. ವಿದ್ಯುತ್ತಿನ ಬಳಕೆಯನ್ನು ಕಡಿಮೆಗೊಳಿಸಲು ಹವಾನಿಯಂತ್ರಣಕ್ಕೆ VAM ಉಪಕರಣಗಳನ್ನು ಬಳಸುವುದರ ಮೂಲಕ ವಾರ್ಷಿಕವಾಗಿ 18 ಲಕ್ಷ ಯೂನಿಟ್ ವಿದ್ಯುತ್ತನ್ನು ಕ್ಯಾಂಪ್ಕೋ ಫ್ಯಾಕ್ಟರಿ ಉಳಿತಾಯ ಮಾಡುತ್ತಿದೆ.

**ರಬ್ಬರ್ ಮತ್ತು ಕರಿಮೆಣಸು ಕ್ಷೇತ್ರದಲ್ಲಿ ಕ್ಯಾಂಪ್ಕೋ :**

ಕೃಷಿಕರ ನಿರೀಕ್ಷೆಗೆ ಅನುಗುಣವಾಗಿ ರಬ್ಬರ್ ಮತ್ತು ಕರಿಮೆಣಸಿನ ಖರೀದಿ ಮತ್ತು ಮಾರಾಟಕ್ಕೂ ಕ್ಯಾಂಪ್ಕೋ ತಯಾರಾಗಿದೆ. ಕಲ್ಲಿಕೋಟೆಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸ್ಪೈಸ್ ರಿಸರ್ಚ್ ನೊಂದಿಗೆ ಕ್ಯಾಂಪ್ಕೋ ಮಾಡಿಕೊಂಡ ಒಪ್ಪಂದದ ಪರಿಣಾಮವಾಗಿ ಕರಿಮೆಣಸು ಮತ್ತು ರಬ್ಬರ್ ಖರೀದಿ ಮತ್ತು ವ್ಯಾಪಾರಕ್ಕೆ ಉತ್ತಮ ಅವಕಾಶಗಳು ಲಭಿಸಿರುವುದು ಕೃಷಿಕರಿಗೆ ಆಶಾದಾಯಕವಾಗಿದೆ. ಕೃಷಿಕರ ಬೇಡಿಕೆಗೆ ಅನುಗುಣವಾಗಿ ಉಳಿದ ಉತ್ಪನ್ನಗಳಾದ ತೆಂಗಿನಕಾಯಿ, ಗೇರುಬೀಜ ಇವುಗಳ ಖರೀದಿ ಮತ್ತು ವ್ಯಾಪಾರಕ್ಕೆ ಅನುಕೂಲವಾಗುವಂತೆ ಸಂಸ್ಥೆಯ ನಿಯಮಾವಳಿಯಲ್ಲಿ ಅಗತ್ಯವಾದ ತಿದ್ದುಪಡಿಯನ್ನು ತರುವುದಕ್ಕೂ ಕ್ಯಾಂಪ್ಕೋ ಚಿಂತನೆ ನಡೆಸುತ್ತಿದೆ.

**ಸೇವಾ ಕಾರ್ಯಗಳು :** ಕಷ್ಟಪಟ್ಟು ದುಡಿಯುವ ಕೃಷಿಕನೇ ಕ್ಯಾಂಪ್ಕೋದ ಬೆನ್ನೆಲುಬು. ಆತನ ಯೋಗಕ್ಷೇಮವನ್ನು ನೋಡಿಕೊಳ್ಳುವ ನಿಟ್ಟಿನಲ್ಲೂ ನಮ್ಮ ಸಂಸ್ಥೆಯು ಗಮನವನ್ನು ಹರಿಸಿದೆ. ಸಂಸ್ಥೆಯ ಸೇವಾ ಯೋಜನೆಯ ಭಾಗವಾಗಿ ಕಳೆದ ಆರ್ಥಿಕ ವರ್ಷದಲ್ಲಿ 11 ಮಂದಿ ಸದಸ್ಯರಿಗೆ ತೆರೆದ ಹೃದಯ ಶಸ್ತ್ರಚಿಕಿತ್ಸೆ ಮತ್ತು 8 ಮಂದಿ ಸದಸ್ಯರಿಗೆ ಡಯಾಲಿಸಿಸ್‌ಗೆ ಹೀಗೆ ಒಟ್ಟು 19 ಮಂದಿಗೆ ತುರ್ತು ಆರ್ಥಿಕ ನೆರವು ನೀಡಲಾಗಿದೆ.

**ಉಪಸಂಹಾರ :** ಭೂ ಪ್ರಕೃತಿ, ಹವಾಮಾನ, ಅಡಕೆಯ ಗುಣಮಟ್ಟ ಇವೆಲ್ಲವೂ ಚಲನಶೀಲವಾದುದರಿಂದ ಅಡಕೆ ಮಾರುಕಟ್ಟೆಯಲ್ಲೂ ಸ್ಥಿರತೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದರೂ ಕೂಡಾ ಕ್ಯಾಂಪ್ಕೋ ತನ್ನ ಐದು ದಶಕಗಳ ವ್ಯವಹಾರದ ಅನುಭವದ ಹಿನ್ನಲೆಯಲ್ಲಿ ಮಾರುಕಟ್ಟೆಯ ಏರಿಳಿತಗಳ ಸ್ಪಂದನವನ್ನು ಅರಿತುಕೊಂಡು ಬೆಳೆಗಾರರಿಗೆ ತಮ್ಮ ಉತ್ಪನ್ನಗಳಿಗೆ ನ್ಯಾಯ ಬೆಲೆ ಲಭಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಲೇಬೇಕು. ಮಾತ್ರವಲ್ಲ ಕೃಷಿಕರಿಗೆ ಈ ನಿಟ್ಟಿನಲ್ಲಿ ತಿಳುವಳಿಕೆಯನ್ನು ಮತ್ತು ಸಹಕಾರಿ ಮನೋಭಾವವನ್ನು ಮೂಡಿಸಲೂ ಪ್ರಯತ್ನಿಸುತ್ತಿದೆ.

ಕೃಷಿಕರ ಭರವಸೆಯ ಆಶಾಕೇಂದ್ರವಾಗಿ ಕ್ಯಾಂಪ್ಕೋ ಸಂಸ್ಥೆ ಮುನ್ನಡೆಯುತ್ತಿದೆ. ಅಧ್ಯಕ್ಷರು, ನಿರ್ದೇಶಕ ಮಂಡಳಿಯ ಸಮರ್ಥ ನೇತೃತ್ವ, ಕಠಿಣ ಪರಿಶ್ರಮಿಗಳಾದ ಕೃಷಿಕರ ಸಹಕಾರ ಮತ್ತು ಸಾಮರಸ್ಯ, ಔದ್ಯೋಗಿಕ ಮತ್ತು ಸಿಬ್ಬಂದಿ ವರ್ಗದವರ ಪ್ರಾಮಾಣಿಕ ನಿರಂತರ ದುಡಿಮೆ, ಮಾರುಕಟ್ಟೆಯ ವರ್ತಕ ಸಮೂಹದ ಸಹಕಾರ ಇವೆಲ್ಲವುಗಳ ಪರಿಣಾಮವಾಗಿ ಕ್ಯಾಂಪ್ಕೋ ಸಹಕಾರಿ ರಂಗದ ಹೆಮ್ಮೆಯ ಅದ್ವಿತೀಯ ಸಂಸ್ಥೆಯಾಗಿ ಬೆಳೆದು ನಿಂತಿದೆ. ಹಾಲಿ ವರ್ಷದಲ್ಲಿ 1740 ಕೋಟಿ ರೂಪಾಯಿಯ ವ್ಯವಹಾರ ಕ್ಯಾಂಪ್ಕೋ ಇತಿಹಾಸದಲ್ಲಿ ದಾಖಲೆಯೇ ಸರಿ. ಸಂಸ್ಥೆಯ ಬೆಳವಣಿಗೆಯಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು ವ್ಯವಹಾರದಲ್ಲಿ ಪಾರದರ್ಶಕತೆಯನ್ನು ಹೊಂದಿ ಬೆಳೆಗಾರರ ಹಿತರಕ್ಷಣೆ ಮತ್ತು ಸಂಕಲ್ಪ ಸಿದ್ಧಿಗಾಗಿ ಜಾಗತಿಕ ಮಟ್ಟದಲ್ಲಿ ಬೆಳಗುವ ಸಹಕಾರಿ ಸಂಸ್ಥೆಯಾಗಿ ಕ್ಯಾಂಪ್ಕೋ ಬೆಳೆದು ನಿಲ್ಲಲಿ ಎಂದು ಪ್ರಾರ್ಥಿಸುತ್ತೇವೆ.

# RBI NEWS - MAY - 2018

**K. Vittal Shetty,** Banking Consultant, kohimavittal@Hotmail.com, Mob : 9845699904

**May 29, 2018 :** The Monetary Policy Committee (MPC) will meet on June 4-6, 2018 for the Second Bi-monthly Monetary Policy Statement for 2018-19. The resolution of the MPC will be placed on the website at 2.30 pm on June 6, 2018.

| Policy Rates with effect from 02 AUGUST 2017 | % |
|---|---|
| POLICY REPO RATE | 6.00% |
| REVERSE REPO RATE | 5.75% |
| MARGINAL STANDING FACILITY RATE | 6.25% |
| BANK RATE | 6.25% |
| Reserve Ratios | % |
| Cash Reserve Ratio | 4.00% |
| Statutory Reserve Ratio WEF 14 OCTOBER 2017 | 19.50% |

Date : May 23, 2018

Scheduled Banks' Statement of Position in India as on Friday, May 11, 2018

(Amount in Billions of)

| | | SCHEDULED COMMERCIAL BANKS | | | ALL SCHEDULED BANKS | | |
|---|---|---|---|---|---|---|---|
| | | 12-MAY-2017 | 27-APR-2018 * | 11-MAY-2018 * | 12-MAY-2017 | 27-APR-2018 * | 11-MAY-2018 * |
| I | a) Deposits | 105860.83 | 114313.2 | 113921.65 | 108705.56 | 117340.03 | 116929.37 |
| | i) Demand | 11007.2 | 12260.33 | 11675.81 | 11263.52 | 12540.58 | 11956.82 |
| | ii) Time | 94853.62 | 102052.91 | 102245.87 | 97442.05 | 104799.48 | 104972.59 |
| II | CASH | 584.4 | 694.1 | 650.84 | 602.24 | 711.47 | 667.47 |
| III | INVESTMENTS | 32376.51 | 33705.18 | 34000.94 | 33248.86 | 34640.88 | 34939.22 |
| IV | BANK CREDIT | 75909.41 | 85343.42 | 85510.99 | 78267.09 | 87921.76 | 88093 |

## IMPORTANT NEWS

**1. May 10, 2018 :** Revised guidelines on lending to Priority Sector for Primary (Urban) Co-operative Banks (UCBs). Refer circular UBD.CO.BPD. (PCB). MC.No.18/09.09.001/2013-14 dated October 8, 2013 on the captioned subject and amendments thereto from time to time, consolidated in Master Circular DCBR.BPD.(PCB).MC.No:11/09.09.001/2015-16 dated July 1, 2015. The existing guidelines have been reviewed and it has been decided to issue revised guidelines in supersession of the guidelines in the above-mentioned Master Circular.

**2. Salient features of the revised guidelines are as under :**

i. Target for lending to total priority sector and weaker section will continue as 40 per cent and 10 per cent, respectively, of Adjusted Net Bank Credit (ANBC) or credit equivalent of off-balance sheet exposure, whichever is higher, as hitherto.

ii. **Agriculture :** Distinction between direct and indirect agriculture is dispensed with.

iii. Bank loans to food and agro processing units will form part of Agriculture.

iv. Medium Enterprises, Social Infrastructure and Renewable Energy will form part of priority sector.

v. A target of 7.5 per cent of ANBC or credit equivalent of off-balance sheet exposure, whichever is higher, has been prescribed for Micro Enterprises.

vi. Education : Distinction between loans for education in India and abroad is dispensed with.

vii. Micro Credit ceases to be a separate category under priority sector.

viii. Loan limits for housing loans qualifying under priority sector have been revised.

ix. Priority Sector assessment will be monitored through quarterly and annual statements.

3. The revised guidelines will be operational with effect from the date of this circular. Priority sector loans sanctioned under the guidelines issued prior to the date of this circular will continue to be classified under priority sector till maturity / renewal.

**4. Achievement of Priority Sector targets :** Achievement of priority sector targets will be taken into account while granting regulatory clearances/ approvals for various purposes. With effect from April 1, 2018, achievement of priority sector targets will be included as a criterion for classifying a UCB as Financially Sound and Well Managed (FSWM), in addition to the criteria specified in our circulars UBD.CO.LS.(PCB).Cir.No.20/07.01.000/2014-15 and DCBR.CO.LS.(PCB).Cir.No.4/07.01.000/2014-15 dated October 13, 2014 and January 28, 2015 respectively. For the financial year 2018-19, shortfall in achieving the priority sector target/sub-target will be assessed based on the position as on March 31, 2018. From the financial year 2019-20 onwards, the achievement at

the end of the financial year will be arrived at based on the average of priority sector target/sub-target achievement as at the end of each quarter

**Directions, Withdrawals, Penalties & Cancellation of Licences of Urban Co-operative Banks/Banks.**

**1) May 04, 2018 :** Tumkur Grain Merchants Co-operative Bank Ltd., Tumkur, Karnataka – Penalised. RBI has imposed a monetary penalty of Rs. 5.00 lakh (Rupees Five lakh only), for violating Reserve Bank of India's instructions/guidelines on Know Your Customer (KYC) norms/Anti-Money Laundering (AML) standards/ Combating of Financing of Terrorism (CFT) / Obligation of banks under PMLA, 2002.

**2) May 09, 2018 :** Directions under Section 35A of the Banking Regulation Act, 1949 (AACS) – The Karad Janata Sahakari Bank Ltd., Karad, Maharashtra- Extension of period for a further period of 06 (six) months from May 10, 2018 to November 09, 2018 Directive dated May 03, 2018 subject to review.

**3) May 09, 2018 :** Universal Co-operative Urban Bank Ltd., Mancherial, Telangana – Penalised. RBI has imposed a monetary penalty of Rs. 0.50 lakh (Rupees Fifty thousand only), for violation of Reserve Bank of India directives and guidelines on loans and advances to directors and their relatives.

**4) May 14, 2018 :** The Mehsana Urban Co-operative Bank Limited, Mehsana (Gujarat) – Penalised. RBI has imposed a monetary penalty of Rs. 1.00 Crore (Rupees One Crore only), for violation of the directives/ instructions/ guidelines issued to Urban Co-operative Banks (UCBs) under the provisions of the Act, ibid relating to grant of advances to directors and their relatives, Know Your Customer (KYC)/Anti Money Laundering (AML) norms, group exposure norms, etc.

**5) May 15, 2018 :** RBI imposed penalty on The Vriddhachalam Co-operative Urban Bank Ltd. (No.E 81), 64 South Fort Street, Vriddhachalam, 606001. RBI has imposed a monetary penalty of Rs. 2.00 lakh (Rupees two lakh), for violation of the directive of the Reserve Bank prohibiting extension of loans and advances to Directors/their relatives.

**6) May 16, 2018 :** Extension of Vasantdada Nagari Sahakari Bank Ltd, Osmanabad, Maharashtra. RBI has now further extended the directions for a period of six months from May 14, 2018 to November 13, 2018. The Directions stipulate certain restrictions and/ or ceiling on withdrawal / acceptance of deposits.

**7) May 16, 2018 :** RBI imposes penalty on The United Co-operative Bank Ltd., Bagnan Station Road (North), PO Bagnan, Dist-Howrah, West Bengal. RBI has imposed on April 19, 2018, a monetary penalty of Rs. 5.00 lakh (Rupees Five Lakh) for violations/ non-adherence of (a) Area of Operation, Branch Authorisation Policy, Opening/ Up-gradation of Extension Counters, ATMs and Shifting/Splitting/Closure of Offices dated July 1, 2015, and (b) Section 35(2) of the Banking Regulation Act, 1949 (AACS).

**8) May 17, 2018 :** RBI imposed penalty on The Chittoor Co-operative Town Bank Ltd., Chittoor, Andhra Pradesh. RBI has imposed a monetary penalty of Rs.10,000/- (Rupees Ten Thousand only), for violation of Reserve Bank of India directives and guidelines on loans and advances to directors and their relatives.

**9) May 18, 2018 :** Reserve Bank of India imposes monetary penalty on South Indian Bank Limited. RBI has imposed, by an order dated May 14, 2018, a monetary penalty of Rs. 50 million for non-compliance with the directions issued by RBI on Income Recognition and Asset Classification (IRAC) norms, Know Your Customer (KYC) norms and treasury function and for deficiencies in its compliance function and compliance culture.

**10) May 19, 2018 :** RBI issues Directions to the Shivam Sahakari Bank Ltd., Ichalkaranji, Dist; Kolhapur, Maharashtra. According to the Directions, depositors will be allowed to withdraw a sum not exceeding Rs. 1000 (Rupees One Thousand only ) of the total balance held in every saving bank or current account or any other deposit account by whatever name called,

**11) May 19, 2018 :** RBI issues Directions to the Padmashree Dr. Vitthalrao Vikhe Patil Co-operative Bank Ltd., Nashik, Maharashtra. According to the Directions, depositors will be allowed to withdraw a sum not exceeding Rs. 1000 (Rupees One Thousand only) of the total balance held in every saving bank or current account or any other deposit account by whatever name called.

**12) May 28, 2018 :** RBI extends Directions issued to Rupee Co-operative Bank Ltd., Pune for a further period of three months from June 01, 2018 to August 31, 2018. The last extension was for a period of six months from November 22, 2017 to May 31, 2018.


**Source: www.rbi.org.in**

ಸ್ವಾಭಿಮಾನಿ ಸಹಕಾರಿ


Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 32




# ವಿಧಾನಸಭೆಗೆ ಚುನಾಯಿತರಾದ ಪ್ರಮುಖ ಸಹಕಾರಿ ಮುಖಂಡರುಗಳು


ಶ್ರೀ ಆರ್.ವಿ.ದೇಶಪಾಂಡೆ



ಶ್ರೀ ಶಾಮನೂರು ಶಿವಶಂಕರಪ್ಪ


ಶ್ರೀ ಹೆಚ್.ಕೆ. ಪಾಟೀಲ್



ಶ್ರೀ ಕೆ. ಶ್ರೀನಿವಾಸಗೌಡ


ಶ್ರೀ ಹೆಚ್.ಡಿ. ರೇವಣ್ಣ


ಶ್ರೀ ಜಿ.ಟಿ. ದೇವೇಗೌಡ


ಶ್ರೀ ಶಿವಾನಂದ ಪಾಟೀಲ್


ಶ್ರೀ ವೆಂಕಟರಾವ್ ನಾಡಗೌಡ


ಶ್ರೀ ಹಾಲಪ್ಪ ಬಸಪ್ಪ ಆಚಾರ್


ಶ್ರೀ ಎಸ್.ಟಿ. ಸೋಮಶೇಖರ್


ಶ್ರೀ ಸಿ.ಎಸ್. ಬಾಲಕೃಷ್ಣ


ಶ್ರೀ ಆರ್. ನರೇಂದ್ರ


ಶ್ರೀ ಎ. ಶಿವರಾಮ ಹೆಬ್ಬಾರ್


ಶ್ರೀ ಎಸ್.ಆರ್. ಶ್ರೀನಿವಾಸ್


ಶ್ರೀಮತಿ ಶಶಿಕಲಾ ಜೊಲ್ಲೆ


ಶ್ರೀ ಸೋಮ ಶೇಖರ ರೆಡ್ಡಿ


ಶ್ರೀ ಕೆ.ವೈ. ನಂಜೇಗೌಡ


ಶ್ರೀ ರಮೇಶ ಜಾರಕಿಹೊಳಿ


ಶ್ರೀ ಮುರುಗೇಶ ನಿರಾಣಿ


ಶ್ರೀ ಅರಗ ಜ್ಞಾನೇಂದ್ರ


ಶ್ರೀ ಬಸನಗೌಡ ಪಾಟೀಲ ಯತ್ನಾಳ


ಶ್ರೀ ಪರಣ್ಣ ಮುನವಳ್ಳಿ


ಶ್ರೀ ಪ್ರತಾಪಗೌಡ ಪಾಟೀಲ


ಶ್ರೀ ಮಹಂತೇಶ ದೊಡ್ಡಗೌಡರ


ಶ್ರೀ ಸುನೀಲ ಕುಮಾರ

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ. : 080-23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು - 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ - 585102. ದೂ: 08472-270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010